ಸಂಪುಟ 01 | ಸಂಚಿಕೆ 48 | ಸೋಮವಾರ 29 ಡಿಸೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ಮಾನವ ದಿನ (ರಾಷ್ಟ್ರಕವಿ ಕುವೆಂಪು ಜನ್ಮದಿನ):** ಕನ್ನಡದ ಹೆಮ್ಮೆಯ ಕವಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನವನ್ನು ಕರ್ನಾಟಕದಲ್ಲಿ "ವಿಶ್ವ ಮಾನವ ದಿನ"ವನ್ನಾಗಿ ಆಚರಿಸಲಾಗುತ್ತದೆ. ಕುವೆಂಪು ಅವರ 'ವಿಶ್ವಮಾನವ ಸಂದೇಶ'ವನ್ನು ಸಾರಲು ಈ ದಿನದಂದು ರಾಜ್ಯಾದ್ಯಂತ ಕವಿಗೋಷ್ಠಿಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.

**2)ಅಂತರಾಷ್ಟ್ರೀಯ ಸೆಲ್ಲೋ ದಿನ (International Cello Day):** ಸಂಗೀತ ಲೋಕದಲ್ಲಿ ಸೆಲ್ಲೋ ವಾದ್ಯದ ಮಹತ್ವವನ್ನು ಸಾರಲು ಮತ್ತು ಪ್ರಸಿದ್ಧ ಸೆಲ್ಲೋ ವಾದಕ ಪ್ಯಾಬ್ಲೋ ಕಾಸಾಲ್ಸ್ ಅವರ ಗೌರವಾರ್ಥವಾಗಿ ಈ ದಿನವನ್ನು ಆಚರಿಸಲಾಗುತ್ತದೆ.


## ಸುಭಾಷಿತ

ದುಡಿ, ಮೈ ಮುರಿದು ದುಡಿ, ಹೆಚ್ಚು ಹೆಚ್ಚಾಗಿ
ದುಡಿ, ಆ ನಿನ್ನ ದುಡಿಮೆಯಲ್ಲಿ ಕ್ರಮ,
ನಿಯಮ, ಗುರಿ, ದಕ್ಷತೆ ಇರಲಿ

-ಸರ್ ಎಂ ವಿಶ್ವೇಶ್ವರಯ್ಯ

## ಜ.4ಕ್ಕೆ ಸಿದ್ದೇಶ್ವರ ಸ್ವಾಮೀಜಿಗೆ ಗುರುನಮನ

ನೈಜ್ಯ ದೇಸೆ ನ್ಯೂಸ್



ಬಾಗಲಕೋಟೆ : ಗಾಯುಕಿ ಅನಘಾ ಪಾಟೀಲ ಅವರಿಂದ ವಚನ ನವುನ, ಸಾಧಕರಿಗೆ, ಭಾರತೀಯು ರಕ್ಷಣಾ ಪಡೆ ನಿವೃತ್ತ ಯೋಧ-ರಿಗೆ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಹಮ್ಮಿಕೊಳ್ಳಲಾಗಿದೆ. ಬಾಗಲಕೋಟೆ: ಕುದರಿಕನ್ನೂರ ಲೇಔಟ್‌ನಲ್ಲಿ ಜ.4ರಂದು ಸಂಜೆ 5ಕ್ಕೆ ವಚನ ರಕ್ಷಕ ಗೆಳೆಯುರ ಬಳಗದ ವತಿಯಿಂದ ಜ್ಞಾನ ಯೋಗಾಶ್ರಮದ ಸಿದ್ದೇಶ್ವರ ಸ್ವಾಮೀಜಿಗೆ ಗುರುನಮನ ಕಾರ್ಯಕ್ರಮ ಹಮ್ಮಿಕೊಳ್ಳಲು ಬಳಗದ ಸಭೆಯಲ್ಲಿ ನಿರ್ಧ-ರಿಸಲಾಗಿದೆ.ಜ.2ರಂದು ಬೆಳಿಗ್ಗೆ 6ಕ್ಕೆ ವಿದ್ಯಾಗಿರಿ ಬಸ್ ನಿಲ್ದಾನದಿಂದ ಪ್ರಮುಖ ರಸ್ತೆಗಳಲ್ಲಿ ಸದ್ಭಾವನಾ ನಡಿಗೆ ಹಮ್ಮಿಕೊಳ್ಳಲಾಗಿದೆ. ವಿದ್ಯಾಗಿರಿಯ ಕನ್ನೂರು ಹಿರೇಮಠದ ವಿಶ್ವರಾಜೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಬಾದಾಮಿಯು ಜಿ.ಜಿ. ಹಿರೇಮಠ ಉಪನ್ಯಾಸ ನೀಡಲಿದ್ದಾರೆ.ಜ್ಞಾನಯೋಗಾಶ್ರಮದ ಹರ್ಷಾನಂದ ಸ್ವಾಮೀಜಿ, ಶಿವಾನಂದ ಮಠದ ಗುರುಪ್ರಸಾದ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ಇದೇ ಸಂದರ್ಭದಲ್ಲಿ ಸಾಹಿತಿ ರಾಜು ಗಡ್ಡಿ ಅವರ 'ಖಾಲಿ ಕೊಡಗಳು' ಕಾದಂಬರಿ ಬಿಡುಗಡೆ ಮಾಡಲಾಗುವುದು.ಎಸ್.ಎ.ಡೆಂಗಿ, ಎಸ್.ಎಚ್. ತೆಗ್ಗಿ, ಶಿವಾನಂದ ಕುಂಬಾರ, ಐ.ಎಂ. ಗೌಡರ, ಡಾ. ರವಿ ಕೋಟೆಣ್ಣವರ, ಶಿವಲಿಂಗಪ್ಪ ಕುದರಿಕನ್ನೂರ, ಶಶಿಧರ ಹಂಜಿ, ಬಸವರಾಜ ಹೂಲಗೇರಿ, ಎಚ್.ಡಿ.ಹೊಸಮನಿ, ಮುತ್ತು ಮಡಿವಾಳರ ಮತ್ತಿತರರು ಪಾಲ್ಗೊಂಡಿದ್ದರು.

## ರಾಷ್ಟ್ರೀಯ ಪತ್ರಿಕಾ ದಿನಾಚರಣೆ, ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ – ಪತ್ರಕರ್ತರು ಸಮಾಜಮುಖಿಯಾಗಿ ಯೋಚಿಸಲಿ : ಎನ್.ಎಸ್.ಬೋಸರಾಜು ಸಲಹೆ







ನೈಜ್ಯ ದೇಸೆ ನ್ಯೂಸ್

ರಾಯಚೂರು ಡಿಸೆಂಬರ್ 28 (ಕರ್ನಾಟಕ ವಾರ್ತೆ): ಜನರು ಪ್ರತಿನಿತ್ಯ ಮಾಧ್ಯಮಗಳನ್ನು ಮತ್ತು ಪತ್ರಕರ್ತರನ್ನು ಗಮನಿಸುತ್ತಾರೆ. ಸಮಾಜ ಸುಧಾರಣೆಯಲ್ಲಿ ಪತ್ರಕರ್ತರ ಪಾತ್ರವು ಸಹ ಮಹತ್ವದ್ದಾಗಿದ್ದು, ಹಾಗಾಗಿ ಜನರು ತಮ್ಮ ಮೇಲಿಟ್ಟಿರುವ ನಂಬಿಕೆಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಪತ್ರಕರ್ತರು ಸಮಾಜಮುಖಿಯಾಗಿ ಯೋಚಿಸಬೇಕು, ಕರ್ತವ್ಯ ನಿರ್ವಹಿಸಬೇಕು ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಹೇಳಿದರು.ನಗರದ ಪತ್ರಿಕಾ ಭವನದಲ್ಲಿ ಡಿಸೆಂಬರ್ 28ರ ಭಾನುವಾರ ದಂದು ರಾಯಚೂರು ರಿಪೋಟ-ರ್ಸ್ ಗಿಲ್ಡ್, ಜಿಲ್ಲಾ ಮತ್ತು ಪ್ರಾದೇಶಿಕ ದಿನ ಪತ್ರಿಕೆಗಳ ಸಂಪಾದಕರ ಸಂಘ ರಾಯಚೂರು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.ಸ್ವತಂತ್ರ ಪೂರ್ವದಲ್ಲಿ ಪತ್ರಿಕೆಗಳನ್ನು ನಡೆಸುವುದು ಕಷ್ಟವಾಗಿತ್ತು ಎಂಬುದನ್ನು ನಾವು ತಿಳಿದಿದ್ದೇವೆ. ಅಂತಹ ಪರಿಸ್ಥಿತಿ ಈಗಲೂ ಇದೆ ಎಂಬುದನ್ನು ಅರಿತು ರಾಜ್ಯ ಸರ್ಕಾರವು ಪತ್ರಕರ್ತರಿಗಾಗಿ ಅನೇಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ ಎಂದು ತಿಳಿಸಿದರು. ರಾಯಚೂರು ಇತಿಹಾಸ ಗಮನಿಸಿದಾಗ ಸುದ್ದಿಮೂಲ, ರಾಯಚೂರು ವಾಣಿಯಂತಹ ಅನೇಕ ಪತ್ರಿಕೆಗಳು ಸಂಕಷ್ಟದ ಸ್ಥಿತಿಯಲ್ಲೂ ಉತ್ತಮವಾಗಿ ಪ್ರಕಟವಾಗಿ ಜಿಲ್ಲೆಯ ಅನೇಕ ಪತ್ರಕರ್ತರಿಗೆ ವೃತ್ತಿ ಬುನಾದಿಯನ್ನು ನೀಡಿವೆ. ಈ ಪತ್ರಿಕೆಗಳಿಂದ ಅನೇಕರು ಪತ್ರಕರ್ತರಾಗಿ ಹೊರಹೊಮ್ಮಿದ್ದನ್ನು ನೋಡಬಹುದಾಗಿದೆ. ಈ ಪತ್ರಿಕೆಗಳು ನಮಗೆ ಮಾರ್ಗದರ್ಶನ ಮಾಡಿವೆ. ಸಮಸ್ಯೆಯನ್ನು ಯಾವ ರೀತಿ ಬಗೆಹರಿಸಬೇಕೆಂದು ಸಲಹೆಗಳನ್ನು ನೀಡಿವೆ ಎಂದು ಸಚಿವರು ತಿಳಿಸಿದರು.

ಜಿಲ್ಲೆಯ ಎಲ್ಲಾ ಪತ್ರಕರ್ತರು ನಮ್ಮೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಇಲ್ಲಿನ ಪತ್ರಕರ್ತರ ಬೇಡಿಕೆಯಂತೆ ಈಗಾಗಲೆ ಹೊಸ ಬಸ್ ನೀಡಿದ್ದೇವೆ. ಪತ್ರಕರ್ತರಿಗಾಗಿ ಪತ್ರಿಕಾ ಭವನದ ಸೌಕರ್ಯ ಕಲ್ಪಿಸಿದ್ದೇವೆ. ನಂತರ ಎರಡನೇ ಮಹಡಿ ನಿರ್ಮಾಣ-ಕ್ಕೆ ಸಹ ಅನುದಾನ ನೀಡಿದ್ದೇವೆ. ಮುಂದೆಯೂ ನೀಡುತ್ತೇವೆ ಎಂದು ಸಚಿವರು ತಿಳಿಸಿದರು. ಕೆಲವು ಮಾಧ್ಯಮ ಸಂಸ್ಥೆಗಳು ದೊಡ್ಡ ದೊಡ್ಡ ಉದ್ಯಮಿಗಳ ಕೈ ಸೇರಿವೆ. ಕೆಲವು ಮಾಧ್ಯಮಗಳು ಉದ್ಯಮ ರೂಪ ಪಡೆದುಕೊಂಡಿದ್ದು ಈ ಮಧ್ಯೆಯೇ ಪತ್ರಕರ್ತರು ತಮ್ಮ ವೃತ್ತಿಗೆ ನಿಷ್ಠರಾಗಿ ನಡೆಯಬೇಕು. ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಬೇಕು. ಪತ್ರಕರ್ತರ ಪರಿಸ್ಥಿತಿ ಕಠಿಣವಾಗಿದ್ದರು ಸಹ ಇಲ್ಲಿನ ವರದಿಗಾರರು ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಗ್ರಾಮೀಣ ಭಾಗದಲ್ಲಿನ ಪತ್ರಕರ್ತರು ಸಹನಿಷ್ಠಾವಂತರಾಗಿಕಾರ್ಯನಿರ್ವಹಿಸು ತ್ತಿದ್ದಾರೆ. ರಾಯಚೂರು ಜಿಲ್ಲೆಯ ಎಲ್ಲ ಪತ್ರಕರ್ತರ ಮೇಲೆ ನಮಗೆ ವಿಶ್ವಾಸವಿದೆ ಎಂದು ತಿಳಿಸಿದ್ದಾರೆ. ಈ ವೇಳೆ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಅವರು ಮಾತನಾಡಿ, ಶಾಸಕಾಂಗ, ಕಾರ್ಯಾಂಗವನ್ನು ಕೆಲವೊಮ್ಮೆ ತಿದ್ದಿ ಸರಿಪಡಿಸುವ ಪತ್ರಿಕಾರಂಗದ ಇತಿಹಾಸ ಅತ್ಯಂತ ಅನನ್ಯವಾಗಿದೆ. ಮಹತ್ವದ ಪತ್ರಿಕಾರಂಗವನ್ನು ಪ್ರವೇಶಿಸುವ ಪ್ರತಿಯೊಬ್ಬರಿಗೂ ತರಬೇತಿಯ ಅವಶ್ಯಕತೆ ಇರುತ್ತದೆ. ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಜನರು ಪತ್ರಿಕಾ ಕ್ಷೇತ್ರಕ್ಕೆ ಬರುತ್ತಿದ್ದು, ಅವರಿಗೆ ಕಾರ್ಯಾಗಾರ ಏರ್ಪಡಿಸಬೇಕು. ಯಾವುದೇ ವಿಷಯವನ್ನು ಬರೆಯುವಾಗ, ತೋರಿಸುವಾಗ ಅದರಲ್ಲಿ ಸತ್ಯವನ್ನು ಹುಡುಕಬೇಕು. ಅರೆಬರೆ ಮಾಹಿತಿ, ಮೂಲದೊಂದಿಗೆ ನಿರ್ಧಾರಕ್ಕೆ ಬರಬಾರದು. ಪತ್ರಕರ್ತರು ಅಧ್ಯಯನ ಮಾಡಬೇಕು. ಪತ್ರಕರ್ತರು ತಮ್ಮ ಜವಾಬ್ದಾರಿ ಅರಿತು ಆತ್ಮಸಾಕ್ಷಿಯಿಂದ ಕೆಲಸ ಮಾಡಿದಾಗ, ಪತ್ರಿಕಾ ವೃತ್ತಿಯ ಘನತೆ ಹೆಚ್ಚಲಿದೆ ಎಂದು ತಿಳಿಸಿದರು.ಈ ವೇಳೆ ಕಲಬುರಗಿ ಪೀಠದ ಕರ್ನಾಟಕ ರಾಜ್ಯ ಮಾಹಿತಿ ಆಯೋಗದ ಆಯುಕ್ತರಾದ ಬಿ ವೆಂಕಟಸಿಂಗ ಅವರು ಮಾತನಾಡಿ, ಕೆಲವು ದಶಕಗಳ ಹಿಂದೆ, ರಾಜ್ಯದಲ್ಲಿ ಮೈಸೂರು ಬಿಟ್ಟರೆ ಸ್ವತಂತ್ರವಾಗಿ ಪತ್ರಿಕಾ ಭವನವು ರಾಯಚೂರು ಜಿಲ್ಲೆಯಲ್ಲಿ ಮಾತ್ರ ಇತ್ತು. ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಸಂಸ್ಥೆಯು ಅನೇಕ ದಶಕಗಳಿಂದ ನಿರಂತರ ಸೇವೆ ಮಾಡುತ್ತಿದೆ. ಈ ಮೂಲಕ ಪತ್ರಕರ್ತ-ರಿಗೆ ಆರ್ಥಿಕ ಸಹಾಯ ಮಾಡುತ್ತಿದೆ. ರಾಯಚೂ-ರಿನ ಪತ್ರಕರ್ತರಿಗೆ ಬೇಕಾಗುವ ವಿವಿಧ ಸೌಲಭ್ಯ, ವಿವಿಧ ದತ್ತಿ ಪ್ರಶಸ್ತಿಗಳನ್ನು ನೀಡುತ್ತ ಪತ್ರಕರ್ತರನ್ನು ಪ್ರೋತ್ಸಾಹಿಸುತ್ತಿದೆ ಎಂದರು. ಕಲ್ಯಾಣ ಕರ್ನಾಟಕ ಭಾಗದಿಂದ ಮೊಟ್ಟಮೊದಲ ಬಾರಿಗೆ ಮಾಹಿತಿ ಆಯುಕ್ತರನ್ನಾಗಿ ತಮ್ಮನ್ನು ನೇಮಕ ಮಾಡಲಾಗಿದ್ದು, ತಮ್ಮ ಆಡಳಿತಾವಧಿಯಲ್ಲಿ ಗುರುತರ ಕಾರ್ಯ ಮಾಡುವುದಾಗಿ ಬಿ ವೆಂಕಟಸಿಂಗ ಹೇಳಿದರು. ರಿಪೋರ್ಟರ್ಸ್ ಗಿಲ್ಡ್ ವೆಬ್‌ಸೈಟ್ ಲೋಕಾರ್ಪಣೆ: ಕಾರ್ಯಕ್ರಮದಲ್ಲಿ ಶಾಸಕರಾದ ಬಸನಗೌಡ ದದ್ದಲ್ ಅವರು ರಾಯಚೂರು ರಿಪೋರ್ಟರ್ಸ್ ಗಿಲ್ಡ್ ವೆಬ್‌ಸೈಟ್ ಲೋಕಾರ್ಪಣೆ ಮಾಡಿದರು. ಇದೆ ವೇಳೆ, ಬಿ ವೆಂಕಟಸಿಂಗ ಅವರಿಗೆ ವಿಶೇಷ ಸನ್ಮಾನ ಮಾಡಲಾಯಿತು.ವಿವಿಧ ಪತ್ರಕರ್ತರಿಗೆ ಸನ್ಮಾನ: ಕಾರ್ಯಕ್ರಮದಲ್ಲಿ ಪ್ರಜಾಪ್ರಸಿದ್ಧ ದಿನಪತ್ರಿಕೆಯ ಹಿರಿಯ ಉಪ ಸಂಪಾದಕರಾದ ರಘುನಾಥ-'ರೆಡ್ಡಿ ಮನ್ಸಲಾಪೂರು, ಪ್ರಜಾವಾಣಿ ದಿನಪತ್ರಿಕೆಯ ರಾಯಚೂರು ಜಿಲ್ಲಾ ವರದಿಗಾರರಾದ ಚಂದ್ರಕಾಂತ ಮಸಾನಿ, ಪವರ್ ಟಿವಿ ಛಾಯಾಗ್ರಾಹಕರರಾದ ಅಬ್ದುಲ್ ಖಾದರ್, ಅಮೋಘ ಕೇಬಲ್ ವರದಿಗಾರರಾದ ಶ್ರೀನಿವಾಸ ಕೆ., ಪ್ರಜಾಪ್ರಸಿದ್ಧ ದಿನಪತ್ರಿಕೆಯ ವರದಿಗಾರರಾದ ಬಿ. ರಾಜು ಅವರಿಗೆ ವಿವಿಧ ದತ್ತಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.ಇದೇ ಸಂದರ್ಭದಲ್ಲಿ ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಅಧ್ಯಕ್ಷರಾದ ವಿಜಯ್ ಜಾಗಟಗಲ್, ರಾಯಚೂರು ಮಹಾನಗರ ಪಾಲಿಕೆಯ ಅಧ್ಯಕ್ಷರಾದ ನರಸಮ್ಮ ನರಸಿಂಹಲು ಮಾಡಗಿರಿ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾ-ರಿಗಳಾದ ಕುಮಾರಸ್ವಾಮಿ., ವಿಜಯವಾಣಿ ಪತ್ರಿಕೆಯ ಗಂಗಾವತಿ ಸ್ಥಾನಿಕ ಸಂಪಾದಕರಾದ ಜಗನ್ನಾಥ ಆರ್. ದೇಸಾಯಿ, ಜಿಲ್ಲಾ ಮತ್ತು ಪ್ರಾದೇಶಿಕ ದಿನಪತ್ರಿಕೆಗಳ ಸಂಪಾದಕರ ಸಂಘದ ಜಿಲ್ಲಾಧ್ಯಕ್ಷರಾದ ಪಿ.ಚನ್ನಬಸವ ಬಾಗಲವಾಡ, ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಪ್ರಧಾನ ಕಾರ್ಯದರ್ಶಿಗಳಾದ ವೆಂಕಟೇಶ ಹೂಗಾರ ಹಾಗೂ ಜಿಲ್ಲಾ ಮತ್ತು ಪ್ರಾದೇಶಿಕ ದಿನಪತ್ರಿಕೆಗಳ ಸಂಪಾದಕರ ಸಂಘದ ಪ್ರಧಾನ ಕಾರ್ಯದರ್ಶಿ ಖಾನ್‌ಸಾಬ್ ಮೋಮಿನ್, ಡಿ.ಕೆ.ಕಿಸಾನ್ ಸೇರಿದಂತೆ ವಿವಿಧ ಗಣ್ಯರು ಇದ್ದರು.ಸಣ್ಣ ವಿರೇಶ್ ನಿರೂಪಿಸಿದರು.

## ವಶಿಷ್ಠಧಾಮದಿಂದ ನೂತನ ಕ್ಯಾಲೆಂಡರ್ ಬಿಡುಗಡೆ ಮತ್ತು ಸಾಧಕರಿಗೆ ಸನ್ಮಾನ




ನೈಜ್ಯ ದೇಸೆ ನ್ಯೂಸ್

ಸಾಮಾಜಿಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ಸೇವೆಗಳು ಇಂದಿನ ದಿನಮಾನಗಳಲ್ಲಿ ಪ್ರಚಾರ ಪಡೆಯುವುದು ಹಾಗೂ ಪ್ರಸಿದ್ಧಿ ಹೊಂದುವುದು ಆಗಿದೆ. ಆದರೆ ಯಶಸ್ವಿಯಾಗಿ ಜನಮಾನಸದಲ್ಲಿ ನಿರಂತರ ಬದಲಾವಣೆಗಳಿಗಾಗಿ ನಿಸ್ವಾರ್ಥ ಸಾಮಾಜಿಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ಸೇವೆಗಳಿಂದ ಯಶಸ್ವಿ ಕಾರ್ಯಕ್ರಮಗಳಾಗುತ್ತವೆ ಎಂದು ಬ್ರಾಹ್ಮಣ ಸಮಾಜದ ಮುಖಂಡರಾದ ದೋಟಿಹಾಳ ವೇಂಕಣ್ಣಾಚಾರ್ಯ ಜೋಷಿ ಅಭಿಪ್ರಾಯ ವ್ಯಕ್ತಪಡಿಸಿದರು.ಅವರು ಸಿಂಧನೂರು ನಗರದ ಉಪ್ಪಾರವಾಡಿಯ ವಸಿಷ್ಠಧಾಮದಲ್ಲಿ 2026 ಹೊಸ ಕ್ಯಾಲೆಂಡರ್ ಬಿಡುಗಡೆ ವಶಿಷ್ಠಧಾಮ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಅತಿಥಿಗಳಾಗಿ ಮಾತನಾಡಿ ವಶಿಷ್ಠಧಾಮ ಬ್ರಾಹ್ಮಣ ಸಮಾಜದ ಹೆಮ್ಮೆಯ ಸಂಸ್ಥೆಯಾಗಿದೆ. ಚಿಕ್ಕಮಕ್ಕಳಿಗೆ ಆಟಪಾಠ ನೀತಿಕಥೆಗಳನ್ನು ಹೇಳುವ ಮೂಲಕ ನಿರಂತರ ಕಾರ್ಯಚಟುವಟಿ-ಕೆ ನಡೆಸುವಲ್ಲಿ ವಶಿಷ್ಯಧಾಮ ಸಮಾಜದಲ್ಲಿ ಮುಖ್ಯಪಾತ್ರ ವಹಿಸಿದೆ ಎಂದರು.ವಶಿಷ್ಠಧಾಮ ಸೇವಾಟ್ರಸ್ಟ್ ಅಧ್ಯಕ್ಷರಾದ ಭೀಮಸೇನಾಚಾರ್ಯ ನವಲಿ ಮಾತನಾಡಿ ಮಕ್ಕಳಿಗೆ ಜ್ಞಾನಶಕ್ತಿ. ಇಚ್ಛಾಶಕ್ತಿ ಹಾಗೂ ಕ್ರೀಯಾಶಕ್ತಿಯಿಂದ ಮಕ್ಕಳಲ್ಲಿ ಒಳ್ಳೆಯ ಮನಸ್ಸು ಬರುತ್ತದೆ. ಒಳ್ಳೆಯ ವಿಚಾರಗಳು ಮನಸ್ಸಿಗೆ ಹಾಕಿದರೆ ಸಮಾಜದಲ್ಲಿ ಒಳ್ಳೆಯ ಕೆಲಸ ಮಾಡಬಹುದಾಗಿದೆ ಇದರಿಂದ ಸಮಾಜದಲ್ಲಿ ವಿಶೇಷ ವ್ಯಕ್ತಿಗಳಾಗಿ ರಾಷ್ಟ್ರಕ್ಕೆ ಸೇವೆಯನ್ನು ಸಲ್ಲಿಸಬಹುದಾಗಿದೆ ಎಂದರು.ಸಾವಯವ ಕೃಷಿಕರಾದ ಬಸ್ಸಪ್ಪ ಅಯ್ಯಪ್ಪ ವಂಕಲಕುಂಟಿ ಕೊಪ್ಪಳ ಇವರಿಗೆ ವಶಿಷ್ಠಧಾಮ ಕೃಷಿರತ್ನಾಕರ, ದಾಸಸಾಹಿತ್ಯ ನಿರಂತರ ಪ್ರಚಾರಮಾಡುವ ಸಂಪದಾ ಕುಲಕರ್ಣೀ ಸಿದ್ಧಾಂಪುರ ಇವರಿಗೆ ವಶಿಷ್ಠಧಾಮ ಹರಿದಾಸರತ್ನ ಹಾಗೂ ಸಾಮಾಜಿಕ ಕಾರ್ಯಕ್ರಮಗಳ ಸೇವೆಯನ್ನು ಮಾಡುತ್ತಿರುವ ಹನುಮೇಶ ಜಾಗೀರದಾರ ಅವರಿಗೆ ವಶಿಷ್ಠಧಾಮ ವಿಪ್ರಯುವರತ್ನ ಪ್ರಶಸ್ತಿ ನೀಡಲಾಯಿತು.ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಕೃಷಿಕ ಬಸ್ಸಪ್ಪ ಅಯ್ಯಪ್ಪ ಮಾತನಾಡಿ ಇಂದು ನಾವು ಊಟಮಾಡುವ ಪದಾರ್ಥಗಳು ವಿಷಮಯವಾಗಿದೆ. ನಾನು ಸಂಪೂರ್ಣ ಸಾವಯವ ಗೊಬ್ಬರದಿಂದ ಹೊಲದಲ್ಲಿ ಅನೇಕ ರೀತಿಯ ಬೆಳೆಗಳನ್ನು ಬೆಳೆದು ರಾಜ್ಯಮಟ್ಟದ ರಾಷ್ಟ್ರಮಟ್ಟದ ಹಾಗೂ ವಿದೇಶಗಳಲ್ಲಿ ನನ್ನ ಅನುಭವಗಳನ್ನು ತಿಳಿಸುವ ಮೂಲಕ ಅನೇಕ ರೈತರಿಗೆ ಮಾದರಿಯಾಗಿದ್ದೇನೆ ಎಂದರು.ಸಂಪದಾ ಕುಲಕರ್ಣಿ ಹಾಗೂ ಹನುಮೇಶ ಜಾಹಗೀರದಾರ ಮಾತನಾಡಿ ವಶಿಷ್ಠಧಾಮ ಪ್ರಶಸ್ತಿಯಿಂದ ನಮಗೆ ಸಮಾಜದಲ್ಲಿ ಸೇವೆ ಸಲ್ಲಿಸಲು ಪ್ರೇರಣೆಯಾಗಿದೆ ಎಂದರು.ಬ್ರಾಹ್ಮಣ ಸಮಾಜದ ಅಧ್ಯಕ್ಷರಾದ ಗೋವಿಂದರಾವ ಕುಲಕರ್ಣಿ, ವೆಂಕಟರಾವ್ ರಾಜು ಬಂಡಿ, ಪ್ರಭಾಕರ ಕುಲಕರ್ಣಿ, ಪಾಂಡುರಂಗ ದೇಸಾಯಿ ಹಾಗೂ ಗುರುರಾಜ ಕುಲಕರ್ಣಿ ಕಾರ್ಯಕ್ರಮದ ಕುರಿತು ಮಾತನಾಡಿದರು. ಪ್ರಹ್ಲಾದ ಕುಲಕರ್ಣಿ, ಶರಣಬಸವ ಮಸ್ಕಿ, ಸಣ್ಣಮಲ್ಲಪ್ಪ ಮಾಡಗಿರಿ, ಶಂಕರಸಾ ಕಾಟವ, ಜಯತೀರ್ಥದಾಸ, ಬಸವರಾಜ ನಿಪ್ಪಾಣಿ, ಶ್ರೀನಿವಾಸ ಹೊಗಿಬಂಡಿ, ರಮಾಕಾಂತ ಪುರೋಹಿತ, ಭೀಮಸೇನ ಜಾಹಗೀರದಾರ ಉಪಸ್ಥಿತ-ರಿದ್ದರು. ವಶಿಷ್ಠಧಾಮದ ಸತ್ಯನಾರಾಯಣಾಚಾರ್ಯ ನವಲಿ, ಭಾರದ್ವಾಜ ಉಪ್ಪಳ, ಶೋಭಾ ನವಲಿ ಹಾಗೂ ಅ0ಜನಾ ನವಲಿ ಅತಿಥಿಗಳಿಗೆ ಪುಷ್ಪ ಸಮರ್ಪಣೆ ಮೂಲಕ ಸ್ವಾಗತಿಸಿದರು. ಸಾವಿತ್ರಿ ದೀಕ್ಷಿತ್ ವಶಿಷ್ಠಧಾಮ ಗುರುಕುಲ ಮಕ್ಕಳಿಗೆ ಹಾಡು ನೃತ್ಯ ಸಾಂಸಕೃತಿ-ಕ ಕಾರ್ಯಕ್ರಮಗಳು ಜರುಗಿಸುವ ಮೂಲಕ ಕಾರ್ಯಕ್ರಮ ನಿರೂಪಿಸಿದರು. ಸಹನಾ ಪೂಜಾರಿ ಪ್ರಾರ್ಥನಾ ಗೀತೆ ಹಾಡಿದರು.

## ಡಾ. ರಾಜಶೇಖರ್ ಹೆಚ್ ಅವರಿಗೆ "ಆಯುರ್ವೇದ ವಿಶ್ವ ರತ್ನ" ಪ್ರಶಸ್ತಿ







ನೈಜ್ಯ ದೇಸೆ ನ್ಯೂಸ್

**ಬೆಂಗಳೂರು** : ಸ್ವಾಮಿ ವಿವೇಕಾನಂದ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಲಿಂಗಸಗೂರ ಪ್ರಾಚಾರ್ಯರಾದ ಡಾ. ರಾಜಶೇಖರ್ ಹೆಚ್ ಅವರ 25 ವರ್ಷಗಳಿಗೂ ಅಧಿಕ ಅನುಭವ ಹೊಂದಿರುವ ಆಯುರ್ವೇದ ವೈದ್ಯರು ಹಾಗೂ ಶಿಕ್ಷಣತಜ್ಞ ಅವರು ಆಯುರ್ವೇದ ಕ್ಷೇತ್ರಕ್ಕೆ ನೀಡಿದ ವಿಶಿಷ್ಟ ಕೊಡುಗೆಗಳನ್ನು ಗುರುತಿಸಿ "ಆಯುರ್ವೇದ ವಿಶ್ವ ರತ್ನ" ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ. ಡಿ 28 ಬೆಂಗಳೂರಿನ ಅರಮನೆ ಆವರಣದಲ್ಲಿ ನಡೆದ ಎರಡನೇ ಆಯುರ್ವೇದ ವರ್ಲ್ಡ್ ಸಮ್ಮಿಟ್‌ನಲ್ಲಿ ಈ ಗೌರವ ಪ್ರದಾನ ಮಾಡಲಾಯಿತು. ದೇಶ-ವಿದೇಶಗಳಿಂದ ಆಗಮಿಸಿದ ಗಣ್ಯರು, ಆಯುರ್ವೇದ ತಜ್ಞರು ಹಾಗೂ ಪ್ರತಿನಿಧಿಗಳ ಸಮ್ಮುಖದಲ್ಲಿ ಪ್ರಶಸ್ತಿ ವಿತರಿಸಲಾಯಿತು. ಡಾ. ರಾಜಶೇಖರ್ ಹೆಚ್ ಅವರು 15 ವರ್ಷ ಆಯುರ್ವೇದಿಕ್ ಕಾಲೇಜ್ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ , ನಂತರ 10 ವರ್ಷಗಳ ಕಾಲ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ ಇವರು ಸ್ವಾಮಿ ವಿವೇಕಾನಂದ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಲಿಂಗಸೂರಿನಲ್ಲಿ ಪ್ರಾಚಾರ್ಯರಾಗಿ ಸೇವೆಯನ್ನು ಸಲ್ಲಿಸುತ್ತಿದ್ದು ಇವರು ಆಯುರ್ವೇದ ಕ್ಷೇತ್ರದಲ್ಲಿ , ಶಿಕ್ಷಣ ಸೇವೆ ಮೂಲಕ ನೀಡಿದ ನಿರಂತರ ಕೊಡುಗೆಗೆ ಆಯುರ್ವೇದ ಶಿಕ್ಷಣವನ್ನು ಉತ್ತೇಜಿಸುವ ಮತ್ತು ಸಹಾನುಭೂತಿಯ ಆರೋಗ್ಯ ರಕ್ಷಣೆಯನ್ನು ನೀಡುವ ಭರವಸೆಯಿಂದ ಗುರುತಿಸಲ್ಪಟ್ಟಿದ್ದಾರೆ. ಅವರ ಈ ಸೇವೆಯನ್ನು ಗುರುತಿಸಿ ಪ್ರಶಸ್ತಿ ಪ್ರಧಾನ ಮಾಡಿದ್ದಾರೆ . ಈ ಪ್ರಶಸ್ತಿ ಲಭಿಸಿದ್ದಕ್ಕೆ ಸ್ವಾಮಿ ವಿವೇಕಾನಂದ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ಅಧ್ಯಕ್ಷರಾದ ಶಾಂತನಗೌಡ ಪಾಟೀಲ್ ಅವರು ಹಾಗೂ ಆಡಳಿತ ಮಂಡಳಿಯವರು , ಸನ್ ರೈಸ್ ಗ್ರೂಪ್ ಆಫ್ ಇನ್ಸಿಟ್ಯೂಷನ್ ಸಿಂಧನೂರಿನ ಆಡಳಿತ ಮಂಡಳಿಯವರು, ಸರ್ವೋದಯ ಗ್ರೂಪ್ ಆಫ್ ಇನ್ಸಿಟ್ಯೂಷನ್ ಮಾನ್ವಿಯ ಆಡಳಿತ ಮಂಡಳಿಯವರು ಅವರ ಸಹೋದ್ಯೋಗಿ ಉಪನ್ಯಾಸಕರು , ಹರ್ಷವನ್ನು ವ್ಯಕ್ತಪಡಿಸಿ ಅಭಿನಂದನೆಯನ್ನು ಸಲ್ಲಿಸಿದರು

## ಸಾಹಿತ್ಯ ಸಿಂಚನ

ನೀನೇ ನೀನಲ್ಲ..!

ಭಾಷೆ ನಿನದಲ್ಲ ಲಿಪಿ ನಿನದಲ್ಲ
ಕೂಡಿಸಿ ಬರೆದ ಸೆಲೆಯಷ್ಟೆ ನಿನದು
ನಾನೇ ಮಿಗಿಲೆಂಬ ಮದವೇಕೋ.?

ಹೂವು ನಿನ್ನದಲ್ಲ ದಾರ ನಿನ್ನದಲ್ಲ
ಪೋಣಿಸುವ ಕಲೆಯಷ್ಟೆ ನಿನದು
ನಾನೇ ಹಾರವೆಂಬ ಜಂಭವೇಕೋ.?

ಶೃಂಗ ನಿನದಲ್ಲ ಹಾದಿ ನಿನದಲ್ಲ
ಏರಿದಾ ನಡೆಯಷ್ಟೆ ನಿನದು
ನಾನೇ ಶಿಖರವೆಂಬ ಹುಂಬತನವೇಕೋ.?

ಪಾಯ ನಿನದಲ್ಲ ಸೂರು ನಿನದಲ್ಲ
ನಡುವಿನ ಬದುಕಷ್ಟೆ ನಿನದು
ಸೌಧವೇ ನನದೆಂಬ ಮೌಢ್ಯವೇಕೋ.?

ಭೂತ ನಿನದಲ್ಲ ಭವಿಷ್ಯ ನಿನದಲ್ಲ
ಈದಿನ ಈಕ್ಷಣವಷ್ಟೆ ನಿನದು
ನಾನೇ ಅಮರನೆಂಬ ಜಾಡ್ಯವೇಕೋ.?

ಕಾಲ ನಿನದಲ್ಲ ಕಾಯ ನಿನದಲ್ಲ
ನಾಲ್ಕುದಿನದ ಉಸಿರಷ್ಟೆ ನಿನದು
ನಾನೇ ಸ್ಥಿರವೆಂಬ ಭ್ರಾಂತಿಯೇಕೋ.?

ಬತ್ತಿ ನಿನದಲ್ಲ ತೈಲ ನಿನದಲ್ಲ
ಹೊತ್ತಿಸಿದ ಕಿಡಿಯಷ್ಟೆ ನಿನದು
ನಾನೇ ಬೆಳಕೆಂಬ ಭ್ರಮೆಯೇಕೋ.?

ಆಚೆ ನೀನಿಲ್ಲ ಈಚೆಯೂ ನೀನಿಲ್ಲ
ನಿನ್ನೊಳಗಿನ ನೀನೇ ನೀನಲ್ಲ
ನಾನು ನನದೆಂಬ ಭುಕ್ತಿಯೇಕೋ.?

– ಎ.ಎನ್.ರಮೇಶ್.ಗುಬ್ಬಿ.

## ಶರಣ ಬಿ.ಎ.ಕರೀಂಸಾಬ್ ಕುಟುಂಬದಿಂದ ಅಯ್ಯಪ್ಪಸ್ವಾಮಿ ಮಾಲಾಧಾರಿಗಳಿಗೆ ಅನ್ನಪ್ರಸಾದ



ಕವಿತಾಳ : ಪಟ್ಟಣದ ಮುಸ್ಲಿಂ ಸಮಾಜದ ಮುಖಂಡ ಬಸವತತ್ವದ ಅನುಯಾಯಿಯಾದ ಶರಣ ಬಿ.ಎ.ಕರೀಂಸಾಬ್ ಅವರ ಕುಟುಂಬದ ವತಿಯಿಂದ ಪ್ರತಿವರ್ಷದಂತೆ ಇ ವರ್ಷವೂಸಹ ಅಯ್ಯಪ್ಪಸ್ವಾಮಿ ಮಾಲಾಧಾರಿಗಳಿಗೆ ಅನ್ನಪ್ರಸಾದ ವ್ಯವಸ್ಥೆಯನ್ನು ಕೈಗೊಳ್ಳುವ ಮೂಲಕ ಭಾವಕ್ಯತೆಯನ್ನು ಮೆರೆದಿದ್ದಾರೆ. ಸತತವಾಗಿ ಐದು ವಷ್ಗಳಿಂದ ಅಯ್ಯಪ್ಪಸ್ವಾಮಿ ಮಾಲಾಧಾರಿಗಳಿಗೆ ಅನ್ನಪ್ರಸಾದವನ್ನು ಹಮ್ಮಿಕೊಳ್ಳುತ್ತಾಬಂದಿದ್ದು ನಾವೆಲ್ಲರೂ ಒಂದೇ ಎನ್ನುವ ಭಾವನೆ ಮೂಡವುದುರ ಜೊತಡಗಡ ವೈವಿಧ್ಯತೆಯಲ್ಲಿ ಏಕತೆಯನ್ನು ಕಾಣುವ ನಾಡು ನಮ್ಮದು ಅದಕ್ಕಾಗಿ ನಮ್ಮ ನಾಡಿನಲ್ಲಿ ನಾವು ಜನಿಸಿದ್ದು ನಮ್ಮ ಪುಣ್ಯವಾಗಿದೆ, ಓಂ ಶ್ರೀ ಸ್ವಾಮಿಯೇ ಶರಣಂ ಅಯ್ಯಪ್ಪ ಎನ್ನುವ ನುಡಿಯನ್ನು ಸ್ಥತಿಸುವುದರ ಜೊತೆಗೆ ಹಿಂದೂ, ಮುಸ್ಲಿಂ,ಕ್ರೈಸ್ತರು ನಾವೆಲ್ಲರೂ ಸಮಾನತೆಯಿಂದ ನಡೆಯಬೇಕು' ಎಂದು ಬಿ.ಎ.ಕರೀಮಸಾಬ್ ಹೇಳಿದರು.ಕವಿತಾಲ, ಪಾತಾಪುರ, ತೋರಣದಿನ್ನಿ ಪೀಠದ ಎಲ್ಲಾ ಅಯ್ಯಪ್ಪಸ್ವಾಮಿ ಮಾಲಾಧಾರಿಗಳು ಪ್ರಸಾದ ಸ್ವೀಕರಿಸುವ ಮೂಲಕ ಅನ್ನಪ್ರಸಾದ ವ್ಯವಸ್ಥೆ ಕಲ್ಪಿಸಿರುವ ಶರಣ ಕರೀಂಸಾಬ್ ಮತ್ತು ಅವರ ಕುಟುಂಬ್ಬಕೆ ಶುಭಹಾರೈಸಿದರು. ಗುರುಸ್ವಾಮಿ ಚನ್ನಯ್ಯ ಮಂಕಾಲ್, ತೊರಣದಿನನಿಯ ವೆಂಕಟೇಶ್ ಸ್ವಾಮಿ, ಯಮನಪ್ಪ ಸ್ವಾಮಿ, ಭಗವಾನ್ ಸಿಂಗ್ ಸ್ವಾಮಿ ಸಮತ್ತೊಸ್ವಾಮಿ, ಮಲ್ಲಿಕಾರ್ಜುನಸ್ವಾಮಿ, ಆಂಜನೇಯ್ಯಸ್ವಾಮಿ, ಬಸವರಾಜಸ್ವಾಮಿ ಸೇರಿದಂತೆ ಇನ್ನಿತರ ಮಾಲಾಧಾರಿಗಳು ಪ್ರಸಾದವನ್ನು ಸೇವಿಸಿದರು.ಕರೀಂಸಾಬ್ ಕುಟುಂಬದ ಇರ್ಫಾನ್. ಕೆ, ಎಂ.ಎ.ವಹಾಬ್, ಎಂ.ದಿ.ಕಲೀಮ್ ಸೆರಿದಂತೆ ಕುಟುಂಬ ವರ್ಗದವರು ತಮ್ಮ ಭಕ್ತಿ ಭಾವದಿಂದ ತಮ್ಮ ಭಕ್ತಿಯನ್ನು ಮೆರೆದಿದ್ದಾರೆ.

# ಕ್ರೀಡಾಕೂಟ ನೋಂದಣಿಗೆ ಡಿ.31 ಕೊನೆಯ ದಿನ-ರಾಯಚೂರು

ನೈಜ್ಯ ದೆಸೆ ನ್ಯೂಸ್



ರಾಯಚೂರು : ಡಿ 28 ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಜಿಲ್ಲಾ ಸರ್ಕಾರಿ ನೌಕರರ ಸಂಘಗಳ ಸಂಯುಕ್ತಾಶ್ರಯದಲ್ಲಿ 2025–26ನೇ ಸಾಲಿನ ರಾಯಚೂರು ಜಿಲ್ಲಾ ಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿ–ಕ ಸ್ಪರ್ಧೆಗಳನ್ನು ಜ.8 ಹಾಗೂ 9ರ ಬೆಳಿಗ್ಗೆ 10 ಗಂಟೆಗೆ ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದ್ದು, ಭಾಗವಹಿಸಿಸುವವರು ಡಿ.31ರೊಳಗಾಗಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಜಿಲ್ಲೆಯ ಸರ್ಕಾರಿ ನೌಕರರು https://form.svhrt.com/6931869b0a0bd-8c6f89eda9f ಲಿಂಕ್ ಬಳಸಿ ನೋಂದಣಿ ಮಾಡಿಕೊಂಡು ಕ್ರೀಡಾಕೂಟದಲ್ಲಿ ಭಾಗವಹಿಸಬಹುದು. ಕ್ರೀಡಾ ತರಬೇತುದಾರರು, ಆರು ತಿಂಗಳೊಳಗಾಗಿ ನೇಮಕಗೊಂಡವರು, ತಾತ್ಕಾಲಿಕವಾಗಿ ನೇಮಕಗೊಂಡವರು, ಪ್ಯಾರಾ ಮಿಲಿಟರಿ, ಪೊಲೀಸ್, ಸಿಆರ್‌ಪಿಎಫ್, ಅಗ್ನಿಶಾಮಕ ದಳ ಮೊದಲಾದ ಸಮವಸ್ತ್ರಧಾರಿತ ಸಿಬ್ಬಂದಿ ಭಾಗವಹಿಸಲು ಅವಕಾಶವಿರುವುದಿಲ್ಲ. ಎಲ್ಲಾ ಕಾಯಂ ಸರ್ಕಾರಿ ನೌಕರರು ತಾವು ಕೆಲಸ ಮಾಡುವ ಕಚೇರಿ ಮುಖ್ಯಸ್ಥರ ಸಹಿ ಇರುವ ಗುರುತು ಪತ್ರವನ್ನು (ಭಾವಚಿತ್ರ ಸಹಿತ) ಕಡ್ಡಾಯವಾಗಿ ಕ್ರೀಡಾಕೂಟದಲ್ಲಿ ಹಾಜರುಪಡಿಸಬೇಕು. ಒಬ್ಬ ನೌಕರ ಕ್ರೀಡಾಪಟು ಒಟ್ಟು 3 ಆಟಗಳಲ್ಲಿ ಮಾತ್ರ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ರಾಯಚೂರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಂದೇ ಮಾತರಂ ರಾಷ್ಟ್ರಗೀತೆಯ 150 ನೇ ವರ್ಷಚಾರಣೆ ಅಂಗವಾಗಿ ಬೃಹತ್ ಜಾಥ




ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಓಂ.ಮಂಡಳಿ ಶಿವಶಕ್ತಿ ಅವತಾರ್ ಸೇವ ಸಂಸ್ಥಾನ್ ವತಿಯಿಂದ ವಂದೇ ಮಾತರಂ ರಾಷ್ಟ್ರಗೀತೆಯ 150 ನೇ ವರ್ಷಚಾರಣೆ ಅಂಗವಾಗಿ ನಡೆದ ಬೃಹತ್ ಜಾಥ–'ಕ್ಕೆ ಓಂ.ಮಂಡಳಿ ಶಿವಶಕ್ತಿ ಅವತಾರ್ ಸೇವ ಸಂಸ್ಥಾನ್ ತಾಲೂಕು ಸಮಿತಿಯ ಬಿ.ಕೆ. ಅಕ್ಕಮ್ಮ ಚಾಲನೆ ನೀಡಿ ಮಾತನಾಡಿ ನಮ್ಮ ದೇಶಕ್ಕೆ ಸ್ವತಂತ್ರ್ಯ ಪೂರ್ವದಲ್ಲಿ ಸ್ವತಂತ್ರ್ಯ ಹೋರಾಟಗಾರ–ರಿಗೆ ದೇಶಭಕ್ತಿರಿಗೆ ಸ್ಪೂರ್ತಿಯಾಗಿದ್ದ ವಂದೇ ಮಾತರಂ ರಾಷ್ಟ್ರಗೀತೆಯನ್ನು ರಚಿಸಿ 150 ವರ್ಷ ಆದ ಸಂದರ್ಭದಲ್ಲಿ ತಾಲೂಕಿನ ದೇಶಭಕ್ತರನ್ನು ಒಳಗೊಂಡು ಜಾಗೃತಿ ಜಾಥ–'ವನ್ನು ಅಯೋಜಿಸಲಾಗುತ್ತಿದೆ ಎಂದು ತಿಳಿಸಿದರು.ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಬಸವ ವೃತ್ತದ ಮೂಲಕ ತಹಸೀಲ್ದಾರ್ ಕಚೇರಿಯ ವರೆಗೆ ನೂರಾರು ಜನರು ಭಾರತ ಮಾತೆಯ ಭಾವಚಿತ್ರದ ಮೆರವಣಿಗೆಯೊಂದಿಗೆ ಜಾಥ ನಡೆಸಿದರು. ಓಂ.ಮಂಡಳಿ ಶಿವಶಕ್ತಿ ಅವತಾರ್ ಸೇವ ಸಂಸ್ಥಾನ್ ತಾಲೂಕು ಸಮಿತಿಯ ನೂರಾರು ಸದಸ್ಯರು,ಸಾರ್ವಜನಿಕರು ಭಾಗವಹಿಸಿದರು. ಮಾನ್ವಿ: ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಓಂ.ಮಂಡಳಿ ಶಿವಶಕ್ತಿ ಅವತಾರ್ ಸೇವ ಸಂಸ್ಥಾನ್ ವತಿಯಿಂದ ವಂದೇ ಮಾತರಂ ರಾಷ್ಟ್ರಗೀತೆಯ 150 ನೇ ವರ್ಷಚಾರಣೆ ಅಂಗವಾಗಿ ಬೃಹತ್ ಜಾಥ ನಡೆಯಿತು.

# ರೈತರು ಹಾಗೂ ಸಾರ್ವಜನಿಕ ಸಂಪರ್ಕಕ್ಕಾಗಿ ಸೇತುವೆ ನಿರ್ಮಾಣ–ಎನ್ ಎಸ್ ಬೋಸರಾಜು



ನೈಜ್ಯ ದೆಸೆ ನ್ಯೂಸ್

ಸಿರವಾರ : ರೈತರಿಗೆ ಹಾಗೂ ಸಾರ್ವಜನಿಕ–ರಿಗೆ ಅನುಕೂಲಕ್ಕಾಗಿ ಸಂಪರ್ಕ ಕಲ್ಪಿಸುವ ರಸ್ತೆಗಳಿಗೆ ಸೇತುವೆ ನಿರ್ಮಾಣ ಹಾಗೂ ಹರಿಯುವ ಹಳ್ಳಗಳಿಗೆ ಚೆಕ್ ಡ್ಯಾಮ್ ನಿರ್ಮಾಣ ಮಾಡುವ ಮೂಲಕ ಅಂತರ್ಜಲ ವೃದ್ಧಿಗಾಗಿ ಪ್ರಯತ್ನಿಸಲಾಗುತ್ತಿದೆ ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವರಾದ ಎನ್ ಎಸ್ ಬೋಸರಾಜು ಅವರು ತಿಳಿಸಿದರು.ಮಾನ್ವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಿರವಾರ ತಾಲೂಕಿನ ನುಗುಡೋಣಿಯಿಂದ ಎನ್ ಹೊಸೂರು ಸಂಪರ್ಕಿಸುವ ರಸ್ತೆಗೆ ಹ–ರಿಯುವ ಹಳ್ಳಕ್ಕೆ 2 ಕೋಟಿ ರೂ ವೆಚ್ಚದಲ್ಲಿ ಸೇತುವೆ ನಿರ್ಮಾಣ ಕಾಮಗಾರಿಗೆ ಸಚಿವ ಎನ್ ಎಸ್ ಬೋಸರಾಜು ಹಾಗೂ ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಹಂಪಯ್ಯ ನಾಯಕ ಅವರು ಭೂಮಿ ಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು. ಕೆರೆಗಳ ಸಂರಕ್ಷಣೆ ಮೂಲಕ ಅಂತರ್ಜಲ ವೃದ್ಧಿಗಾಗಿ ವೈಜ್ಞಾನಿಕ ಯೋಜನೆಗಳನ್ನು ರೂಪಿಸಿ ಜಿಲ್ಲೆಯಾದ್ಯಂತ ಕೆರೆ–ಕಟ್ಟೆಗಳನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ರೈತರು ನೀರಿಗಾಗಿ ಬಹಳ ಕಷ್ಟಪಡುತ್ತಿದ್ದಾರೆ. ಕೆಲವೆಡೆ ಕೃಷಿ ಚಟುವಟಿಕೆಗಳಿಗಾಗಿ ರೈತರು ಕೆರೆ ಹಾಗೂ ಹರಿಯುವ ಹಳ್ಳಗಳ ಮೇಲೆ ಅವಲಂಬಿತರಾಗಿದ್ದಾರೆ ಹಾಗಾಗಿ ಕೆರೆ–ಕಟ್ಟೆಗಳ ಸಂರಕ್ಷಣೆ ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುತ್ತಿದೆ ಎಂದು ತಿಳಿಸಿದರು.ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಚುಕ್ಕಿ ಚುಗಪ್ಪ ಸಾಹುಕಾರ್ ಶರಣಯ್ಯ ನಾಯಕ್ ಗುಡದಿನ್ನಿ, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ಕಿರಲಿಂಗಪ್ಪ, ಮಲ್ಲಿಕಾರ್ಜುನ ಮಲ್ಲಟ್, ಶಿವಪ್ಪ, ಶಿವಕುಮಾರ್ ಅನೇಕರು ಉಪಸ್ಥಿತರಿದ್ದರು.

# ಡಿಸೆಂಬರ್ 29ರಿಂದ 31 ರವರೆಗೆ ಕೃಷಿ, ಪಶುವೈದ್ಯಕೀಯ ಸಮ್ಮೇಳನ

ನೈಜ್ಯ ದೆಸೆ ನ್ಯೂಸ್

ರಾಯಚೂರು : ಡಿ 28 ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ರಾಷ್ಟ್ರೀಯ ಕೃಷಿ ಅಭಿವೃದ್ಧಿ ಸಹಕಾರಿ ನಿಯಮಿತ ಬಾರಾಮುಲ್ಲಾ, ಜಮ್ಮು ಮತ್ತು ಕಾಶ್ಮೀರ ಇವರ ಸಹಯೋಗದಲ್ಲಿ "ಕೃಷಿ, ಪಶುವೈದ್ಯಕೀಯ ಮತ್ತು ಕೃಷಿಗೆ ಸಂಬಂಧಿತ ವಿಷಯಗಳಲ್ಲಿ ಸುಸ್ಥಿರ ನಾವಿನ್ಯತೆಗಳ" ಕು–ರಿತಾದ ಅಂತರಾಷ್ಟ್ರೀಯ ಸಮ್ಮೇಳನವು (ಆನ್‌ಲೈನ್ ಮತ್ತು ಆಫ್‌ಲೈನ್) ಡಿಸೆಂಬರ್ 29 ರಿಂದ 31 ರವರೆಗೆ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಶ್ರೀ ಜಗಜ್ಯೋತಿ ಬಸವೇಶ್ವರ ಪ್ರೇಕ್ಷಾಗೃಹದಲ್ಲಿ ನಡೆಯುತ್ತಿದೆ. ಮೂರು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ದೇಶದ ವಿವಿಧ ರಾಜ್ಯಗಳ ಉದಯೋನ್ಮುಖ ತಂತ್ರಜ್ಞರು, ಸಂಶೋಧನಾ ವಿದ್ವಾಂಸರು, ಶೈಕ್ಷಣಿಕ ಮತ್ತು ಕೃಷಿ ಉದ್ಯಮದ ಪ್ರತಿನಿಧಿಗಳು, ನೀತಿ ನಿರೂಪಕರು ಹಾಗೂ ವಿದ್ಯಾರ್ಥಿಗಳನ್ನೊಳಗೊಂಡಂತೆ ಸುಮಾರು 500ಕ್ಕಿಂತ ಹೆಚ್ಚು ಸಮ್ಮೇಳನಾರ್ಥಿಗಳು ಭಾಗವಹಿಸುವ ನಿರೀಕ್ಷೆಯಿದೆ.ಅಲ್ಲದೇ, ಕುವೈತ್ ಹಾಗೂ ಮತ್ತಿತರ ದೇಶಗಳಿಂದಲೂ ಕೂಡ ಸಮ್ಮೇಳನಾರ್ಥಿಗಳು ಭಾಗವಹಿಸುವರು. ಕೃಷಿ, ಪಶುವೈದ್ಯಕೀಯ ಮತ್ತು ಕೃಷಿಗೆ ಸಂಬಂಧಿಸಿದ ವಿಜ್ಞಾನಗಳ ವಿಷಯಾಧಾರಿತ ಕ್ಷೇತ್ರಗಳ ಅಡಿಯಲ್ಲಿ ಮೌಖಿಕ ವಿಷಯ ಮಂಡನೆಗೆ ಸಮ್ಮೇಳನವು ಸಾಕ್ಷಿಯಾಗಲಿದೆ.ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ಸಿ. ಎಚ್. ಶ್ರೀನಿವಾಸ ಉದ್ಘಾಟಿಸುವರು. ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿಗಳಾದ ಡಾ. ಎಂ. ಹನುಮಂತಪ್ಪ ಅವರು ಅಧ್ಯಕ್ಷತೆ ವಹಿಸುವರು. ಡಾ. ಎಸ್. ವಿ ಸುರೇಶ್, ಗೌರವಾನ್ವಿತ ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಡಾ. ಆರ್. ಸಿ. ಜಗದೀಶ್, ಗೌರವಾನ್ವಿತ ಕುಲಪತಿಗಳು, ಕೆಎಸ್‌ಎನ್ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ, ಡಾ. ಕೆ. ಸಿ. ವೀರಣ್ಣ, ಕುಲಪತಿಗಳು, ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾ–ರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್, ಡಾ. ಪಿ. ಎಲ್. ಪಾಟೀಲ್, ಗೌರವಾನ್ವಿತ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ, ಡಾ. ವಿಷ್ಣುವರ್ಧನ, ಗೌರವಾನ್ವಿತ ಕುಲಪತಿಗಳು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ ಹಾಗೂ ಶ್ರೀ ಪಿ. ಕಮರ್–ಉದ್–ದಿನ್ ಅಧ್ಯಕ್ಷರು, ರಾಷ್ಟ್ರೀಯ ಕೃಷಿ ಅಭಿವೃದ್ಧಿ ಸಹಕಾರಿ ನಿಯಮಿತ ಬಾರಾಮುಲ್ಲಾ, ಜಮ್ಮು ಮತ್ತು ಕಾಶ್ಮೀರ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.ವಿಶ್ವವಿದ್ಯಾಲಯದ ಆಡಳಿತ ಮಂಡಳಿಯ ಗೌರವಾನ್ವಿತ ಸದಸ್ಯರು, ಅಧಿಕಾ–ರಿಗಳು, ಪ್ರಾಧ್ಯಾಪಕ ವೃಂದ, ಸ್ನಾತಕೋತ್ತರ ವಿದ್ಯಾರ್ಥಿಗಳು ಸೇರಿದಂತೆ ದೇಶದೆಲ್ಲೆಡೆಯಿಂದ ಬರುವ ಸಮ್ಮೇಳನಾರ್ಥಿಗಳು ಉಪಸ್ಥಿತ–ರಿರುವರು ಎಂದು ಕೃವಿವಿಯ ಆಡಳಿತಾಧಿಕಾರಿಗಳು ಹಾಗು ಸಮ್ಮೇಳನ ಸಂಘಟನಾ ಅಧ್ಯಕ್ಷರಾದ ಡಾ.ಜಾಗೃತಿ. ಬಿ ದೇಶಮಾನ್ಯ ಅವರು ತಿಳಿಸಿದ್ದಾರೆ.

# ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯಿಂದ ಸಾಧಕರಿಗೆ ಸನ್ಮಾನ




ನೈಜ್ಯ ದೆಸೆ ನ್ಯೂಸ್

ಬಳ್ಳಾರಿ : ಡಿ 28 ದೆಹಲಿಯ ಎಫ್‌ಐಸಿಸಿಐನ ಸುಸ್ಥಿರ ಕೃಷಿ – 2025ರ ಪ್ರಶಸ್ತಿ ಪುರಸ್ಕೃತರಾದ ಮಾತೃಭೂಮಿ ಸ್ಫೈಸಿ ಪ್ರೈವೇಟ್ ಲಿಮಿಟೆಡ್‌ನ ಸಂಸ್ಥಾಪಕರಾದ ಬ್ರಹ್ಮಯ್ಯನಾಯ್ಡು ತಮ್ಮಿನೇನಿ ಮತ್ತು ಸಹ ಸಂಸ್ಥಾಪಕರಾದ ಶಿವನಗೌಡ ಅವರನ್ನು ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯು ಅಭಿನಂದಿಸಿ, ಗೌರವಿಸಿದೆ. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಅವ್ವಾರು ಮಂಜುನಾಥ್ ಅವರು, ಎಫ್‌ಐಸಿಸಿಐ ಗುರುತಿಸಿ – ಬಹುಮಾನ ನೀಡಿರುವುದರಿಂದ ಭವಿಷ್ಯದಲ್ಲಿ ಸುಸ್ಥಿರ ಕೃಷಿ, ಪರಿಸರ ಸ್ನೇಹಿ, ಆರೋಗ್ಯಕರ ಕೃಷಿ ಮತ್ತು ಸಾವಯುವ ಕೃಷಿ ನಡೆಸಲು ಪ್ರೋತ್ಸಾಹ ನೀಡಿದಂತೆ ಆಗಲಿದೆ ಎಂದರು. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಕೆ.ಸಿ. ಸುರೇಶಬಾಬು ಅವರು, ಕೃಷಿಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಸಾಕಷ್ಟು ಖ್ಯಾತಿಯನ್ನು ಸಾಧಿಸಿದೆ. ಈ ಹಿನ್ನಲೆಯಲ್ಲಿ ಸಾವಯುವ ಕೃಷಿಯಲ್ಲೂ ಬಳ್ಳಾರಿ ಜಿಲ್ಲೆಯು ಎಫ್‌ಐಸಿಸಿಐನಿಂದ ಬಹುಮಾನ ಪಡೆದಿರುವುದು ಶ್ಲಾಘನೀಯ ಎಂದರು. ಸನ್ಮಾನಿತರಾದ ಬ್ರಹ್ಮಯ್ಯನಾಯ್ಡು ತಮ್ಮಿನೇನಿ ಮತ್ತು ಶಿವನಗೌಡ ಅವರು, ಕೃಷಿಯಲ್ಲಿ ಸಾಧನೆಗೆ ಸಾಕಷ್ಟು ಅವಕಾಶಗಳಿವೆ. ಸಾಧನೆ ಮಾಡುವ ಉತ್ಸಾಹಿಗಳಿಗೆ ಸೂಕ್ತ ಮಾರ್ಗದರ್ಶನ – ಪ್ರೆತ್ಸಾಹ ಈ ಕ್ಷೇತ್ರದಲ್ಲಿ ನಿರೀಕ್ಷೆಗೂ ಮೀರಿ ಸಿಗಲಿದೆ. ಕ್ರಿಯಾಶೀಲರು – ಸೃಜನಶೀಲ–ರಿಗೆ ಕೃಷಿ ಕ್ಷೇತ್ರ ಸಾಧನೆಗೆ ಪೂರಕವಾಗಿದೆ ಎಂದರು.ಸಂಸ್ಥೆಯ ಹಿರಿಯ ಉಪಾಧ್ಯಕ್ಷರಾದ ಎಸ್. ದೊಡ್ಡನಗೌಡ, ಉಪಾಧ್ಯಕ್ಷರುಗಳಾದ ಸೊಂತ ಗಿರಿಧರ್, ಪಿ. ಪಾಲಣ್ಣ, ಜಂಟಿ ಕಾರ್ಯದರ್ಶಿಗಳಾದ ವಿ. ರಾಮಚಂದ್ರ, ಖಜಾಂಚಿಗಳಾದ ನಾಗಳ್ಳಿ ರಮೇಶ್, ನಿಕಟಪೂರ್ವ ಅಧ್ಯಕ್ಷರಾದ ಯಶವಂತ ರಾಜ್ ನಾಗಿರೆಡ್ಡಿ, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಉಪ ಸಮಿತಿಗಳ ಚೇರ್ಮನ್ ಗಳು, ವಿಶೇಷ ಆಹ್ವಾನಿತರು, ವಿಶೇಷ ಸಮನ್ವಯ ಸಮಿತಿ ಸದಸ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

KHPT ನೇಮಕಾತಿ 2026 : 2 ನರ್ಸ್ ಮತ್ತು ಕೌನ್ಸಿಲರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಆರೋಗ್ಯ ಪ್ರಚಾರ ಟ್ರಸ್ಟ್ ಡಿಸೆಂಬರ್ 2025 ರ KHPT ಅಧಿಕೃತ ಅಧಿಸೂಚನೆಯ ಮೂಲಕ ನರ್ಸ್ ಮತ್ತು ಕೌನ್ಸಿಲರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬಳ್ಳಾರಿ, ವಿಜಯನಗರ, ಬೆಂಗಳೂರು – ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 02–ಜನವರಿ–2026 ಅಧಿಕೃತ ವೆಬ್‌ಸೈಟ್: khpt.org**


# ನಿಗದಿತ ಅವಧಿಯೊಳಗೆ ಕಾಮಗಾರಿಗಳನ್ನು ಗುಣಮಟ್ಟದಲ್ಲಿ ಪೂರ್ಣಗೊಳಿಸಿ:ಎನ್.ಎಸ್.ಬೋಸರಾಜು




ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ವಿವಿಧ ವಾರ್ಡಗಳಲ್ಲಿ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಶನಿವಾರ ರಾತ್ರಿ ಪರಿಶೀಲಿಸಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲೂಕು ಮಟ್ಟದ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿ ಮಾನ್ವಿ ಪಟ್ಟಣದಲ್ಲಿನ ನಿವಾಸಿಗಳಿಗೆ ಶುದ್ದ ಕುಡಿಯುವ ನೀರು ಪೂರೈಕೆಗಾಗಿ ಕೈಗೊಳ್ಳಲಾದ ಅಮೃತ–2 ಯೋಜನೆಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಬೇಕು ಹಾಗೂ ಬೇಸಿಗೆಯಲ್ಲಿ ಪಟ್ಟಣದ ಜನ–ರಿಗೆ ಕುಡಿಯುವ ನೀರಿನ ತೊಂದರೆ ಉಂಟಾಗದಂತೆ ಶೀಘ್ರವೇ ಕಾಮಗಾರಿಯನ್ನು ಪೂರ್ಣಗೊಳ್ಳಿಸಿ ಪಟ್ಟಣದ ಪ್ರತಿ ಮನೆಗೂ ಕೂಡ ಕುಡಿಯುವ ನೀರಿನ ಸಂಪರ್ಕ ನಳಗಳನ್ನು ಜೋಡಿಸುವುದಕ್ಕೆ ಕ್ರಮ ಕೈಗೊಳ್ಳುವುದಕ್ಕೆ ಗುತ್ತೆದಾರರಿಗೆ ಅಗತ್ಯ ಸೂಚನೆ ನೀಡುವಂತೆ ಕರ್ನಾಟಕ ಕುಡಿಯುವ ನೀರು ಸರಬರಾಜು ಮಂಡಳಿಯ ಅಧಿಕಾರಿ ಚೌಹಾಣ್ ರವರಿಗೆ ಸೂಚನೆ ನೀಡಿದರು ಹಾಗೂ ವಿವಿಧ ಇಲಾಖೆಯ ಪ್ರಗತಿ ಪರಿಶೀಲಿಸಿ ಅಗತ್ಯ ಸೂಚನೆ ಗಳನ್ನು ನೀಡಿದರು.ಸಭೆಯಲ್ಲಿ ಶಾಸಕ ಹಂಪಯ್ಯನಾಯಕ, ತಹಸೀಲ್ದಾರ್ ಭೀಮರಾಯ ಬಿ.ರಾಮಸಮುದ್ರ. ಪುರಸಭೆ ಮುಖ್ಯಾಧಿಕಾರಿ ಪರಶುರಾಮ್ ದೇವಮಾನೆ ಹಾಗೂ ಲ್ಯಾಂಡ್ ಆರ್ಮಿ ಅಧಿಕಾ–ರಿಗಳಾದ ಹನುಮಂತಪ್ಪ ಹಾಗೂ ದೇವರಾಜ್, ಕರ್ನಾಟಕ ಕುಡಿಯುವ ನೀರು ಸರಬರಾಜು ಮಂಡಳಿಯ ಅಧಿಕಾರಿ ಚೌಹಾಣ್, ನಯೋಪ್ರ ತಾ.ಅಧ್ಯಕ್ಷರಾದ ಅಬ್ದುಲ್ ಗಪೂರ್ ಸಾಬ್, ತಾಲೂಕು ಪಂಚ ಗ್ಯಾರಂಟಿ ಸಮಿತಿ ಅಧ್ಯಕ್ಷರಾದ ಬಿ.ಕೆ. ಅಂಬರೇಶಪ್ಪ ವಕೀಲರು, ಪುರಸಭೆಯ ಸದಸ್ಯರಾದ ಕಾಮೇಶ್ ಮಂದಕಲ್, ಅಮ್ಜದ್ ಖಾನ್, ಶೇಕ್ ಫಾರೀದ ಉಮ್ರಿ, ಎಸ್ .ಎಸ್. ಪಾಷಾ, ಮೌಲಾಲಿ ನಾಯ್ಕ್, ಎಂ.ಡಿ. ಮೆಹಮ್ಮದ್, ಹೆಚ್.ಪಿ.ಎಂ.ಬಾಷಾ, ಸಾಬೀರ್ ಹುಸೇನ್, ಮುಖಂಡರಾದ ಸತ್ತಾರ್ ಬಂಗ್ಲೆವಲೆ, ಜಯಪ್ರಕಾಶ್, ರಾಮಕೃಷ್ಣ, ಜಿಲಾನಿ ಖುರೇಶಿ, ಹಂಪಯ್ಯ ನಾಯಕ್ ಬೆಳಗಿನಪೇಟ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು ಮಾನ್ವಿ: ಪಟ್ಟಣದ ಪ್ರವಾಸಿ ಮಂದಿರದಲ್ಲಿ ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜುರವರು ವಿವಿಧ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದರು.

## ಬಳಗಾನೂರು ವಿದ್ಯುತ್ ಉಪ ಕೇಂದ್ರದಿಂದ ಪೂರೈಸಲಾಗುವ ಎಲ್ಲಾ 11ಕೆ.ವಿ ಮಾರ್ಗಗಳಿಗೆ ಡಿ 29,31 & ಜ 2,5,7,9 ಈ ದಿನಾಂಕಗಳಲ್ಲಿ ವಿದ್ಯುತ್ ವ್ಯತ್ಯಯ

ನೈಜ್ಯ ದೆಸೆ ನ್ಯೂಸ್



ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

ದೂ ಸಂಖ್ಯೆ :
email:aeecandsindhanur@gmail.com

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ)
ರವರ ಕಛೇರಿ
ನಿರ್ಮಾಣ ಮತ್ತು ನಿರ್ವಹಣೆ ಉಪ–ವಿಭಾಗ,
ಗು.ವಿ.ಸ.ಕಂ.ನಿ. ಸಿಂಧನೂರು

ಸಂಖ್ಯೆ:ಸಕಾನಿಅ(ವಿ)/ನಿ&ನಿ/ಸಿಂಧ/2025–26/ 265 ದಿನಾಂಕ: 26-12-2025

ಗೆ,
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನೆ ಉಪ ವಿಭಾಗ,
ಗು.ವಿ.ಸಂ.ಕಂ.ನಿ, ಮಸ್ಕಿ.

ಮಾನ್ಯರೇ,

ವಿಷಯ:–ದಿನಾಂಕ 29-12-2025, 31-12-2025, 02-01-2025, 05-01-2025 07-01-2025 ಮತ್ತು 09-01-2025 ರಂದು ದಿನಗಳಲ್ಲಿ ಬೆಳಗ್ಗೆ 11:00 ಗಂಟೆಯಿಂದ ಮಧ್ಯಾಹ್ನ 3:00 ಗಂಟೆಯವರೆಗೆ 33/11ಕೆ.ವಿ ಬಳಗನೂರು ವಿದ್ಯುತ್ ಉಪ–ಕೇಂದ್ರದಿಂದ ಪೂರೈಸಲಾಗುವ ಎಲ್ಲಾ 11ಕೆ.ವಿ ಮಾರ್ಗಗಳಿಗೆ ವಿದ್ಯುತ್ ಅಡಚಣೆಯಾಗುವ ಬಗ್ಗೆ.
ಉಲ್ಲೇಖ:– RIMA INFRA PROJECTS Ltr No.C&M/33KV SHUTDOWN Dated:25.12.2025

******

ಮೇಲ್ಕಾಣಿಸಿದ ವಿಷಯಕ್ಕೆ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, 33/11ಕೆ.ವಿ ಬಳಗನೂರು ವಿದ್ಯುತ್ ಉಪ–ಕೇಂದ್ರದ, 33ಕೆ.ವಿ ಬಳಗನೂರು ಮಾರ್ಗದ, ಪೋತ್ನಾಳ ಗ್ರಾಮದ ಹತ್ತಿರದಲ್ಲಿ ನ್ಯಾಷನಲ್ ಹೈವೇ (National Highway work) ರೋಡ ವಿಸ್ತರಣೆಯ ಕಾಮಗಾರಿಯು ನಡೆಯುತ್ತಿರುವುದರಿಂದ, ಈ ರಸ್ತೆಯ ಪಕ್ಕದಲ್ಲಿರುವ 33ಕೆ.ವಿ. ಮಾರ್ಗದ ಹತ್ತಿರದಲ್ಲಿರುವ 11ಕೆ.ವಿ ಮಾರ್ಗಗಳನ್ನು ಬದಲಾಯಿಸುವ ಕಾಮಗಾರಿ ಹಮ್ಮಿಕೊಂಡಿರುವುದರಿಂದ. ದಿನಾಂಕ 29-12-2025, 31-12-2025, 02-01-2025, 05-01-2025 07-01-2025 ಮತ್ತು 09-01-2025 (6 ದಿನಗಳು) ರಂದು ಈ ದಿನಗಳಲ್ಲಿ ಬೆಳಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 5:00 ಗಂಟೆಯವರೆಗೆ ಬಳಗನೂರು ವಿದ್ಯುತ್ ಉಪ–ಕೇಂದ್ರದಿಂದ ಪೂರೈಸಲಾಗುವ ಎಲ್ಲಾ 11ಕೆ.ವಿ ಮಾರ್ಗಗಳಿಗೆ ವಿದ್ಯುತ್ ಅಡಚಣೆಯಾಗುತ್ತದೆ.

ಆದ್ದರಿಂದ ಸದರಿ ದಿನಾಂಕ ದಂದು ಕಾರ್ಯನಿರ್ವಹಿಸಲು ತೀರ್ಮಾನಿಸಿರುವುದರಿಂದ, ಸದರಿ ಮಾಹಿತಿಯನ್ನು ವಿದ್ಯುತ್ ಗ್ರಾಹಕರಿಗೆ ಹಾಗೂ ದಿನ ಪತ್ರಿಕೆಗೆ ಅಥವಾ ಮಾಧ್ಯಮಗಳ ಮುಖಾಂತರ ಪ್ರಕಟಣೆ ನೀಡಬೇಕಾಗಿ ಈ ಮೂಲಕ ಕೋರಲಾಗಿದೆ.

ತಮ್ಮ ವಿಶ್ವಾಸಿ
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ)
ನಿರ್ಮಾಣ ಮತ್ತು ನಿರ್ವಹಣೆ ಉಪ ವಿಭಾಗ,
ಗು.ವಿ.ಸ.ಕಂ.ನಿ. ಸಿಂಧನೂರು.

ಪ್ರತಿಗಳನ್ನು ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ:
1) ಕಾರ್ಯನಿರ್ವಾಹಕ ಅಭಿಯಂತರರು(ವಿ), ನಿರ್ಮಾಣ ಮತ್ತು ನಿರ್ವಹಣೆ ವಿಭಾಗ, ಜೆಸ್ಕಾಂ, ರಾಯಚೂರು.
2) ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಜೆಸ್ಕಾಂ, ಸಿಂಧನೂರು.

Scanned with CamScanner

ಬಳಗಾನೂರು : ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 29.12.2025,31.12.2025,02.01.2025,05.01.2025,07.01.2025 ಮತ್ತು 09. 01.2025 ರಂದು ಪೋತ್ನಾಳ ಹತ್ತಿರ ನ್ಯಾಷನಲ್ ಹೈವೇ ವಿಸ್ತರಣೆ ಕಾಮಗಾರಿ ನಡೆಯುತ್ತಿರುವುದರಿಂದ ರಸ್ತೆಯ ಅಕ್ಕಪಕ್ಕದಲ್ಲಿರುವ ವಿದ್ಯುತ್ ಕಂಬಗಳ ಸ್ಥಳಾಂತರ ಕೆಲಸ ಇರುವುದ–ರಿಂದ ಮೇಲ್ಕಂಡ ದಿನಾಂಕಗಳಂದು ಬೆಳಿಗ್ಗೆ 11:00ಗಂಟೆಯಿಂದ ಸಾಯಂಕಾಲ 5:00 ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಆದ–ದ್ದರಿಂದ ಎಲ್ಲಾ ಪಂಪ್ಸೆಟ್ ಫೀಡರ್ಗಳನ್ನು ಬೆಳಗ್ಗೆ 04:00 ಗಂಟೆಯಿಂದ ಸರಬರಾಜು ಮಾಡಲಾಗುವುದು ಹಾಗಾಗಿ ವಿದ್ಯುತ್ ಗ್ರಾಹಕರು ಜೆಸ್ಕಾಂ ನೊಂದಿಗೆ ಸಹಕರಿಸಲು ಕೋರಲಾಗಿದೆ






# ಚಾಹಪುಡಿ ಕ್ಯಾಂಪಿನಲ್ಲಿ ಕೋಣಗರುವಿನ ಮೇಲೆ ಚಿರತೆದಾಳಿ ಶಂಕೆ ಭಯಭೀತರಾದ ಗ್ರಾಮಸ್ಥರು

ನೈಜ್ಯ ದೆಸೆ ನ್ಯೂಸ್



ಮಾನ್ವಿ: ತಾಲೂಕಿನ ಚಾಹಪುಡಿ ಕ್ಯಾಂಪಿನಲ್ಲಿ ಶನಿವಾರ ಬೆಳಗಿನ ಜಾವ ಗ್ರಾಮದ ನಿವಾಸಿ ಸಿದ್ದಪ್ಪ ಎನ್ನುವವರ ಮನೆಯ ಹತ್ತಿರದ ಬಯಲು ಜಾಗದಲ್ಲಿ ಕಟ್ಟಲಾದ ಕೋಣಗರುವಿನ ಮೃತ ದೇಹ ಪತ್ತೆಯಾಗಿದ್ದು ಕೋಣಗರುವಿನ ಮೇಲೆ ಚಿರತೆ ದಾಳಿ ಮಾಡಿರುವ ಶಂಕೆ ಗ್ರಾಮಸ್ಥರಲ್ಲಿ ಮೂಡಿದ್ದು ಗ್ರಾಮದ ಜನರು ಭಯಭೀತರಾಗಿದ್ದಾರೆ ಮಾಹಿತಿ ತಿಳಿಯುತ್ತಲೆ ಗ್ರಾಮಕ್ಕೆ ಆರಣ್ಯ ಇಲಾಖೆಯ ಉಪ ವಲಯ ಅರಣ್ಯಾಧಿಕಾರಿ ಮಹೇಶ ಭೇಟಿ ನೀಡಿ ಪರಿಶೀಲಿಸಿ ಕ್ಯಾಂಪಿನ ಸುತ್ತ ಮುತ್ತ ಕೃಷಿ ಜಮೀನಿದ್ದು ಹತ್ತಿರದಲ್ಲಿ ಗುಡ್ಡ ಪ್ರದೇಶವಿರುವುದರಿಂದ ಚಿರತೆ ಅಡಗಿರುವ ಬಗ್ಗೆ ಪರಿಶೀಲನೆ ನಡೆಸಲಾಗುವುದು ರಾತ್ರಿ ವೇಳೆ ಗ್ರಾಮಸ್ಥರು ಒಬ್ಬರೆ ತಿರುಗಾಡುವುದು ಹಾಗೂ ತಮ್ಮ ಚಿಕ್ಕಮಕ್ಕಳನ್ನು ಒರಗಡೆ ಬಿಡುವುದನ್ನು ಮಾಡಬರಾದು ಜಾನುವಾರುಗಳನ್ನು ಬಯಲಿನಲ್ಲಿ ಬಿಡದೆ ಸುರಕ್ಷಿತವಾದ ಪ್ರದೇಶದಲ್ಲಿ ಬಿಡಬೇಕು ಎಂದು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು.ಪಶುವೈದ್ಯಧಿಕಾರಿ ಡಾ.ಅಭಿ ಕೋಣಗರುವಿನ ಮರಣೋತ್ತರ ಪರೀಕ್ಷೆ ನಡೆಸಿ ಸಾವಿನ ಬಗ್ಗೆ ಖಚಿತವಾದ ಮಾಹಿತಿ ವರದಿಯನ್ನು ನೀಡುವುದಾಗಿ ತಿಳಿಸಿದರು.ಅರಣ್ಯ ಇಲಾಖೆಯ ಗಸ್ತು ಅರಣ್ಯಪಾಲಕ ಕೆಂಚಪ್ಪ ಗ್ರಾಮದ ನಿವಾಸಿ ಸಿದ್ದಪ್ಪ ಸೇ–ರಿದಂತೆ ಇನ್ನಿತರರು ಇದ್ದರು.ಮಾನ್ವಿ: ತಾಲೂಕಿನ ಚಾಹಪುಡಿ ಕ್ಯಾಂಪಿನಲ್ಲಿ ಶನಿವಾರ ಬೆಳಗಿನ ಜಾವ ಗ್ರಾಮದ ನಿವಾಸಿ ಸಿದ್ದಪ್ಪ ಎನ್ನುವವರ ಮನೆಯ ಹತ್ತಿರ ಕೋಣಗರುವಿನ ಮೃತದೇಹವನ್ನು ಪರಿಶೀಲಿಸುತ್ತಿರುವ ಅರಣ್ಯಾಧಿಕಾರಿಗಳು.ಮಂಜುಳಾ, ಲಕ್ಷ್ಮೀ, ಆಯಿಷಾ ಪಾಷಾ ಹಾಗೂ ಶಾಲಾ ಮಕ್ಕಳು ಸೇರಿದಂತೆ ಇತರಿದ್ದರು.

# ಕೊಪ್ಪಳ ಶ್ರೀ ಗವಿಸಿದ್ದೇಶ್ವರ ಜಾತ್ರ ಮಹೋತ್ಸವಕ್ಕೆ 15ಸಾವಿರ ರೊಟ್ಟಿ ಕಳುಹಿಸಿದ ಮಾನ್ವಿ ಭಕ್ತರು



ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ಧ್ಯಾನ ಮಂದಿರದ ಆವರಣದಲ್ಲಿ ಕೊಪ್ಪಳ ಶ್ರೀ ಗವಿಸಿದ್ದೇಶ್ವರ ಜಾತ್ರ ಮಹೋತ್ಸವ ಅಂಗವಾಗಿ ಮಾನ್ವಿಯ ಆಖಿಲಭಾರತ ವೀರಶೈವ ಲಿಂಗಾಯತ ಮಹಾಸಭ ತಾಲೂಕು ಘಟಕ ಹಾಗೂ ಶ್ರೀ ಬಸವೇಶ್ವರ ಯುವಕ ಸಂಘ ಜಯನಗರ , ಡಾ.ಪುನೀತ್ ರಾಜಕುಮಾರ ಅಭಿಮಾನಿಗಳ ಸಂಘ ವತಿಯಿಂದ ಭಾನುವಾರ ಅಜ್ಜನ ಜಾತ್ರೆಗೆ 15 ಸಾವಿರ ರೊಟ್ಟಿ, 25 ಕೆ.ಜಿ.ಯ 60 ಅಕ್ಕಿ ಪ್ಯಾಕೇಟ್ ಗಳು ಸೇರಿದಂತೆ ಇತರ ದವಸ ಧಾನ್ಯಗಳನ್ನು ಮಾನ್ವಿಯ ಭಕ್ತರು ಕಳುಹಿಸಿಕೊಟ್ಟರು.ಅಂಬಣ್ಣ, ಶಿವಗ್ಯಾನಿ, ಮರಿಸ್ವಾಮಿ ಮದ್ಲಾಪುರ್, ಈರಣ್ಣನಾಯಕ, ಚಂದ್ರಶೇಖರ ದೇವತಗಲ್, ಮಲ್ಲಿಕಾರ್ಜುನ, ಮಹೇಂದ್ರಪಾಟೀಲ್, ಹನುಮಂತ್ರಾಯ, ಅಮರೇಶನಾಯಕ, ಸಿದ್ದಯ್ಯಸ್ವಾಮಿ ಕಳ್ಳಿಮಠ, ಮಲ್ಲಿಕಾರ್ಜುನ, ಪುರಸಭೆ ನಾಮನಿರ್ದೇಶಿತ ಸದಸ್ಯರಾದ ಕಾಮೇಶ ಮಲ್ಲದಕಲ್,ವಿಜಯಸಾಹುಕರ್, ರಾಜಶೇಖರ ಹಿರೇಮಠ,ರಾಘವೇಂದ್ರ ಶೆಟ್ಟಿ ಸೇರಿದಂತೆ ಇನ್ನಿತರರು ಇದ್ದರು. ಮಾನ್ವಿ: ಪಟ್ಟಣದ ಧ್ಯಾನ ಮಂದಿರದ ಆವರಣದಲ್ಲಿ ಕೊಪ್ಪಳ ಶ್ರೀ ಗವಿಸಿದ್ದೇಶ್ವರ ಜಾತ್ರ ಮಹೋತ್ಸವಕ್ಕೆ ರೊಟ್ಟಿ ಹಾಗೂ ಅಕ್ಕಿ ಕಳುಹಿಸಿದ ಭಕ್ತರು.

# ಪಗಡದಿನ್ನಿ – ರಕ್ತದಾನ ಶಿಬಿರ ಕಾರ್ಯಕ್ರಮ.

ನೈಜ್ಯ ದೆಸೆ ನ್ಯೂಸ್



ಸಿಂಧನೂರು : ಪಗಡದಿನ್ನಿ ಗ್ರಾಮ ಪಂಚಾಯತ್ ಅರಿವು ಕೇಂದ್ರ, ಹಾಗೂ ದೇವರಗುಡಿ ಗ್ರಾಮದಲ್ಲಿ ಅಜೀಮ್ ಪ್ರೇಮಜೀ ಫೌಂಡೇಶನ್ ರಾಯಚೂರು ಹಾಗೂ ಶ್ರೀ ಶಕ್ತಿ ರಕ್ತ ಕೇಂದ್ರ ಸಿಂಧನೂರು ರವರ ಸಹಯೋಗದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. ತಾಲೂಕಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಪಗಡದಿನ್ನಿ ಆವರಣದಲ್ಲಿ ರವಿವಾರ ಈ ರಕ್ತದಾನ ಶಿಬಿರ ಕಾರ್ಯಕ್ರಮವನ್ನು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಎನ್ ಬಸವರಾಜ ಉದ್ಘಾಟಿಸಿದರು.ಕಾರ್ಯಕ್ರಮ ಉದ್ದೇಶಿಸಿ ಶಾಲಾ ಮುಖ್ಯ ಗುರುಗಳಾದ ಪರಸಪ್ಪ ಮಾತನಾಡಿ ದಾನಗಳಲ್ಲಿ ರಕ್ತದಾನ ಮಹಾದಾನ ಜನರ ಜೀವ ರಕ್ಷಣೆಗೆ ರಕ್ತ ಅತ್ಯವಶ್ಯಕವಾಗಿದ್ದು, ರಕ್ತದ ಅವಶ್ಯಕತೆ ಇರುವ ವ್ಯಕ್ತಿಗಳಿಗೆ ರಕ್ತದಾನ ಮಾಡುವುದರ ಮೂಲಕ ಎಲ್ಲರೂ ಜನರ ಅಮೂಲ್ಯವಾದ ಜೀವ ರಕ್ಷಣೆಗೆ ಮುಂದಾಗಬೇಕು ಎಂದರು.ನೊಬೆಲ್ ಕಾಲೇಜ್ ವಿದ್ಯಾರ್ಥಿ ಬಸನಗೌಡ 22 ಸಾರಿ ರಕ್ತದಾನ ಮಾಡಿ ಜೀವನ ಉಳಿಸುವುದರ ಜೊತೆಗೆ ಮಾನವೀಯತೆ ಮೆರೆದಿದ್ದಾನೆ. ಒಟ್ಟು 14 ಜನ ರಕ್ತದಾನ ಮಾಡಿದರು.ಇದೇ ಸಂದರ್ಭದಲ್ಲಿ ಊರಿನ ಮುಖಂಡರಾದ ಶರಣೇಗೌಡ ,ಬಸನಸಗೌಡ ಸಿಂಧನೂರು,ನಿರುಪಾದಿ, ಗ್ರಾಮ ಪಂ. ಸದಸ್ಯರಾದ ,ಪಂಪಾಪತಿ ,ದುಗ್ಗಪ್ಪ, ಎಸ್ ಡಿ ಎಂ ಸಿ ಅಧ್ಯಕ್ಷ ಶರಣಬಸವ,ಫೌಂಡೇಶನ್ ಸಂಚಾಲಕ ಅಯ್ಯನಗೌಡ, ನಿಕಟ ಪೂರ್ವ ಬಿಆರ್‌ಪಿ ರವಿ ಪವಾರ್, ಹಾಗೂ ಮೈನುದ್ದೀನ್, ಷಣ್ಮುಖ ಗೌಡ ,ಗ್ರಂಥಾಲಯ ಮೇಲ್ವಿಚಾರಕರು ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗ ,ಶಾಲಾ ಶಿಕ್ಷಕರು,ಕಾಲೇಜು ಉಪನ್ಯಾಸಕರು,ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಸಾಲಿಡಾರಿಟಿ ಯೂತ್ ಮೂವ್‌ಮೆಂಟ್‌ನ ಆಶ್ರಯದಲ್ಲಿ ಕಾರ್ಯನಿರ್ವಹಿಸುತ್ತಿರುವ "ಜೈ ಹಿಂದ್ ಉಚಿತ ಆಹಾರ ಕೇಂದ್ರ" ತನ್ನ ಎರಡು ವರ್ಷಗಳ ನಿರಂತರ ಉಚಿತ ಆಹಾರ ಸೇವೆ ಹಿನ್ನೆಲೆಯಲ್ಲಿ ವಿಶೇಷ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್



ಸಿಂಧನೂರು : ತಾಲೂಕಿನ ತಾಯಿ ಮಕ್ಕಳ ಆಸ್ಪತ್ರೆ, ಕಥಆ ಕ್ಯಾಂಪ್, ಸಿಂಧನೂರು ಆವರಣದಲ್ಲಿ ಸಾಲಿಡಾರಿಟಿ ಯೂತ್ ಮೂವ್‌ಮೆಂಟ್‌ನ ಆಶ್ರಯದಲ್ಲಿ ಕಾರ್ಯನಿರ್ವಹಿಸುತ್ತಿರುವ "ಜೈ ಹಿಂದ್ ಉಚಿತ ಆಹಾರ ಕೇಂದ್ರವು ತನ್ನ ಎರಡು ವರ್ಷಗಳ ನಿರಂತರ ಸೇವೆ ಪೂರ್ಣಗೊಂಡ ಹಿನ್ನೆಲೆಯಲ್ಲಿ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿತು.ಕಳೆದ ಎರಡು ವರ್ಷಗಳಿಂದ ಜೈ ಹಿಂದ್ ಉಚಿತ ಆಹಾರ ಕೇಂದ್ರವು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬಡ ಮತ್ತು ಅಶಕ್ತ ರೋಗಿಗಳು ಹಾಗೂ ಅವರೊಂದಿಗೆ ಬಂದಿರುವ ಕುಟುಂಬದ ಸದಸ್ಯರಿಗೆ ನಿರಂತರವಾಗಿ ಉಚಿತ ಆಹಾರ ಸೇವೆ ನೀಡುತ್ತಾ,ಮಾನವೀಯತೆ ಮತ್ತು ಸೇವಾಭಾವದ ಉತ್ತಮ ಮಾದ–ರಿಯಾಗಿ ಗುರುತಿಸಿಕೊಂಡಿದೆ.ಗಣ್ಯ ಅತಿಥಿಗಳ ಉಪಸ್ಥಿತಿ ಈ ಕಾರ್ಯಕ್ರಮಕ್ಕೆ ಡಾ. ಚನ್ನಬಸವ (ಮಕ್ಕಳ ತಜ್ಞರು),ಹುಸೇನ್ ಸಾಬ್ (ಅಧ್ಯಕ್ಷರು – ಎಖ–ಊ),ಮೌಲಾನಾ ತಾಜಿಮುದ್ದೀನ್ ಸಾಬ್,ಖಾಜಿ ಜಿಲಾನಿ ಸಾಬ್ (ಅಧ್ಯಕ್ಷರು – ಮಿಲಾಪ್ ಶಾದಿ ಮಹಲ್),ಬಸವರಾಜ ಬಾದರ್ಲಿ (ಪ್ರಗತಿಪರ ಹೋರಾಟಗಾರ),ಸಿರಾಜ್ (ಉಪನ್ಯಾಸಕ) ಮತ್ತು ಇಮ್ತಿಯಾಜ್ ಬೇಗ್ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಕಾರ್ಯಕ್ರಮಕ್ಕೆ ಗೌರವ ಹೆಚ್ಚಿಸಿದರು.ಅತಿಥಿಗಳು ತಮ್ಮ ಭಾಷಣದಲ್ಲಿ ಜೈ ಹಿಂದ್ ಉಚಿತ ಆಹಾರ ಕೇಂದ್ರದ ಸೇವೆಯನ್ನು ಶ್ಲಾಘಿಸಿ,ಸರ್ಕಾರಿ ಆಸ್ಪತ್ರೆಯಲ್ಲಿ ಇಂತಹ ಉಚಿತ ಆಹಾರ ಸೇವೆ ರೋಗಿಗಳು ಮತ್ತು ಅವರ ಕುಟುಂಬಗಳಿಗೆ ಅತ್ಯಂತ ದೊಡ್ಡ ಸಹಾಯವಾಗಿದೆ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದ ನಿರ್ವಹಣೆ ಕಾರ್ಯಕ್ರಮದ ನಿರೂಪಣೆಯನ್ನು ತನ್ವೀರ್ ಅವರು ಸುಸೂತ್ರವಾಗಿ ನಿರ್ವಹಿಸಿದರು.ಕಾರ್ಯಕ್ರಮದ ಆರಂಭದಲ್ಲಿ ಡಾ. ವಾಸಿಂ ಅವರು ಪ್ರಸ್ತಾವಿಕ ನುಡಿಯನ್ನು ನೀಡಿ,ಜೈ ಹಿಂದ್ ಉಚಿತ ಆಹಾರ ಕೇಂದ್ರದ ಉದ್ದೇಶ,ಹಿನ್ನೆಲೆ ಹಾಗೂ ಎರಡು ವರ್ಷಗಳ ಸಾಧನೆಗಳನ್ನು ವಿವ–ರಿಸಿದರು.ಕಾರ್ಯಕ್ರಮದಲ್ಲಿ ಇಸ್ಮಾಯಿಲ್, ನಯೀಮ್, ಮನ್ಸೂರ್, ಸನಾವುಲ್ಲಾ, ಖಾಜಾ, ಉಮರ್ ಮತ್ತು ಸಾಲಿಡಾರಿಟಿ ಯೂತ್ ಮೂವ್‌ಮೆಂಟ್‌ನ ಅನೇಕ ಕಾರ್ಯಕರ್ತರು ಹಾಗೂ ಸ್ವಯಂಸೇವಕರು ಉಪಸ್ಥಿತರಿದ್ದರು.ಧನ್ಯವಾದ ಭಾಷಣ ಕಾರ್ಯಕ್ರಮದ ಅಂತ್ಯದಲ್ಲಿ ಸಾಲಿಡಾರಿಟಿ ಯೂತ್ ಮೂವ್‌ಮೆಂಟ್ ಸಿಂಧನೂರಿನ ಅಧ್ಯಕ್ಷರಾದ ಅಬುಲೈಸ್ ನೈಕ್ ಅವರು ಎಲ್ಲಾ ಅತಿಥಿಗಳು, ದಾನಿಗಳು, ಸ್ವಯಂಸೇವಕರು ಮತ್ತು ಸಹಕರಿಸಿದ ಪ್ರತಿಯೊಬ್ಬರಿಗೂ ಹೃದಯಪೂರ್ವಕ ಧನ್ಯವಾದಗಳನ್ನು ಸಲ್ಲಿಸಿದರು.ಅವರು ಮುಂದಿನ ದಿನಗಳಲ್ಲಿ ಜೈ ಹಿಂದ್ ಉಚಿತ ಆಹಾರ ಕೇಂದ್ರದ ಸೇವೆಯನ್ನುಇನ್ನಷ್ಟು ವಿಸ್ತರಿಸಿ,ಹೆಚ್ಚು ಅಗತ್ಯವಿರುವ ಜನರಿಗೆ ತಲುಪಿಸುವ ಉದ್ದೇಶವಿದೆ ಎಂದು ತಿಳಿಸಿದರು.

# 140 ನೇ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆ



ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು : ಡಿ 29 . ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ 140ನೇ ಸಂಸ್ಥಾಪನಾ ದಿನಾಚರಣೆಯನ್ನು ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯರಾದ ಶರಣಗೌಡ ಪಾಟೀಲ್ ಬಯ್ಯಾಪುರ್ ರವರು ನೇತೃತ್ವ ವಹಿಸಿದರು . ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟು, ರಾಷ್ಟ್ರದ ಏಕತೆ, ಅಖಂಡತೆ ಹಾಗೂ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ ಕಾಂಗ್ರೆಸ್ ಪಕ್ಷದ ಎಲ್ಲಾ ಹಿರಿಯ ನಾಯಕರು ಮತ್ತು ಮಹಾನ್ ತ್ಯಾಗಿಗಳನ್ನು ಈ ಸಂದರ್ಭದಲ್ಲಿ ಸ್ಮರಿಸಿ ಕಾಂಗ್ರೆಸ್ ಪಕ್ಷವು ದೇಶದ ಪ್ರಜಾಪ್ರಭುತ್ವದ ರಕ್ಷಣೆಗೆ ಹಾಗೂ ಸಾಮಾಜಿಕ ನ್ಯಾಯದ ಅನುಷ್ಠಾನಕ್ಕೆ ನೀಡಿರುವ ಕೊಡುಗೆಗಳನ್ನು ಸ್ಮರಿಸಿದರು.

ಈ ಸಂದರ್ಭದಲ್ಲಿ ನಗರ ಯೋಜನೆ ಪ್ರಾಧಿಕಾರದ ಅಧ್ಯಕ್ಷ ಭೂಪನಗೌಡ ಪಾಟೀಲ ಕರಡಕಲ್, ಗ್ಯಾರಂಟಿ ಯೋಜನೆಗಳ ಜಿಲ್ಲಾ ಅಧ್ಯಕ್ಷ ಪಾಮಯ್ಯ ಮುರಾರಿ, ಗುಂಡಪ್ಪ ನಾಯಕ್, ಸೋಮಶೇಖರ್ ಐದನಾಳ, ಪ್ರಮೋದ ಕುಲ್ಕರ್ಣಿ, ಶರಣಬಸವ ವಾರದ್, ಶಿವನಗೌಡ ವಂದಲ್ಲಿ, ಅನಿಷ್ ಪಾಷಾ, ಅಮರೇಶ ಮೆದಿನಪುರ, ವೆಂಕಟೇಶ ಕಳ್ಳಿಲಿಂಗಸಗೂರು, ನಾಗರಾಜ್ ಕುಪ್ಪಣ್ಣ, ಲಾಲಪ್ಪ ರಾಠೋಡ, ಜಗದೀಶ ಪಾಟೀಲ್, ಪ್ರಕಾಶ್ ಕುರಿ, ಶಿವಾಜಿ ಕಟ್ಟಿಮನಿ, ಶರಣಪ್ಪ ಹುನುಕುಂಟಿ, ಮೋಹನ್ ಗೋಸ್ಲೆ ಕರಡಕಲ್, ಮೌನೇಶ ತೊಪ್ಪಲ್ ದೊಡ್ಡಿ ಸೇರಿದಂತೆ ಪಕ್ಷದ ಹಿರಿಯ ಮುಖಂಡರು, ಪದಾಧಿಕಾರಿಗಳು ಕಾರ್ಯಕರ್ತರು ಉಪಸ್ಥಿತರಿದ್ದರು.

# ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ "ವಿವೇಕ ಪಥ ರಾಷ್ಟ್ರದ ಹಿತ"ಮಕ್ಕಳಲ್ಲಿ ನಾಡಿನ ಜವಾಬ್ದಾರಿಯ ಅರಿವು ಮೂಡಿಸುವ 6 ನೇ ಕಾರ್ಯಕ್ರಮ.

ನೈಜ್ಯ ದೆಸೆ ನ್ಯೂಸ್



ಸಿಂಧನೂರು:ಡಿ 27 ರಾಮಕೃಷ್ಣ ಆಶ್ರಮದ ವತಿಯಿಂದ ಇಂದು "ವಿವೇಕ ಪಥ ರಾಷ್ಟ್ರದ ಹಿತ " 6ನೇ ಕಾರ್ಯಕ್ರಮವನ್ನು ಸಿಂಧನೂರಿನ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯಲ್ಲಿ ಆಯೋಜಿಸಲಾಗಿತ್ತು.ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಸಿಂಧನೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಪೂಜ್ಯ ಶ್ರೀ ಸ್ವಾಮಿ ಸದಾನಂದ ಮಹಾರಾಜ್ ರವರು ವಿದ್ಯಾರ್ಥಿಗಳಿಗೆ ಭಜನೆ ಹೇಳಿಕೊಟ್ಟರು ಹಾಗೂ ವಿದ್ಯಾರ್ಥಿಗಳಿಗೆ ಅಧ್ಯಯನ, ವ್ಯಕ್ತಿತ್ವ ನಿರ್ಮಾಣಕಾರಿ ವಿಷಯಗಳ ಬಗ್ಗೆ ತಿಳಿಸಿದರು. ಕಾರ್ಯಕ್ರಮದ ಉಪನ್ಯಾಸಕರಾದ ಶ್ರೀ ಪಂಪಾಪತಿ ಯಾದವ, ವ್ಯವಸ್ಥಾಪಕರು, ಯೂಆಈಅ ಬ್ಯಾಂಕ್ ಲಿಮಿಟೆಡ್ ಮುಖ್ಯ ಶಾಖೆ ಸಿಂಧನೂರು ಇವರು"ವಿದ್ಯಾರ್ಥಿಗಳಿಗಾಗಿ ಹಣಕಾಸು ಶಿಕ್ಷಣ" ವಿಷಯದ ಕುರಿತು ಅಕೌಂಟ್ ಮಾಡುವ ವಿಧಾನ, ಹಣ ಉಳಿತಾಯ,ಬ್ಯಾಂಕಿನ ವ್ಯವಹಾರಗಳ ಮಾಹಿತಿಗಳ ಕುರಿತು ವಿದ್ಯಾರ್ಥಿಗಳಿಗೆ ಅತ್ಯಪಯುಕ್ತ ಮಾಹಿತಿ ನೀಡಿದರು.ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಶ್ರೀ ಹೇಮಣ್ಣ ಪ್ರಾಚಾರ್ಯರು, ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ ಸಿಂಧನೂರು ಇವರು ವಿದ್ಯಾರ್ಥಿಗಳಿಗೆ ಇಂತಹ ಕಾರ್ಯಕ್ರಮಗಳಿಂದ ಸಣ್ಣ ವಯಸ್ಸಿನಲ್ಲಿಯೇ ಉತ್ತಮ ವ್ಯವಹಾರಿಕ ಜ್ಞಾನ ದೊರೆಯುತ್ತದೆಂದು ಹೇಳಿದರು..

# ತೊಗರಿ ಖರೀದಿಗೆ ಕೇಂದ್ರಗಳ ಆರಂಭ



ನೈಜ್ಯ ದೆಸೆ ನ್ಯೂಸ್

ಹೊಸಪೇಟೆ : ಬೆಂಬಲ ಬೆಲೆ ಯೋಜನೆಯಡಿ 2025-26ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಎಫ್ಎಕ್ಯೂ ಗುಣಮಟ್ಟದ ತೊಗರಿ ಉತ್ಪನ್ನವನ್ನು ಕೇಂದ್ರ ಸರ್ಕಾರ ನಿಗದಿಪಡಿಸಿದ ಬೆಂಬಲ ಬೆಲೆ ಪ್ರತಿ ಕ್ವಿಂಟಲ್‌ಗೆ ₹8,000ರಂತೆ ರೈತರಿಂದ ಖರೀದಿಗಾಗಿ ಖರೀದಿ ಕೇಂದ್ರವನ್ನು ಆರಂಭಿಸಲಾಗಿದೆ ಎಂದು ಬಳ್ಳಾರಿ ಕೃಷಿ ಮಾರಾಟ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ. ವಿಜಯನಗರ ಶಾಖೆಯಿಂದ ಜಿಲ್ಲೆಯಲ್ಲಿ ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘದ ಕಚೇರಿ ಹರಪನಹಳ್ಳಿಯಲ್ಲಿ, ಮೊ.9686709600 ಖರೀದಿ ಕೇಂದ್ರ ತೆರೆಯಲಗಿದೆ. ಜತೆಗೆ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಘ ನಿ. ಕಚೇರಿ ಮರಿಯಮ್ಮನಹಳ್ಳಿ, ಹಗರಿಬೊಮ್ಮನಹಳ್ಳಿ ಮೊ.6743453271, ಹೂವಿನಹಡಗಲಿ ಮೊ. 7259822170 ಮತ್ತು ಕೂಡ್ಲಿಗಿಯ ತುಂಗಭದ್ರಾ ಗ್ರೌಂಡ್ ನಟ್ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿ ಮೊ.6363144145 ಇಲ್ಲಿ ಖರೀದಿ ಕೇಂದ್ರಗಳನ್ನು ಪ್ರಾರಂಭಿಲಾಗಿದೆ. ಜಿಲ್ಲೆಯ ರೈತರು ಬೆಂಬಲ ಯೋಜನೆಯನ್ನು ಸದುಪಯೋಗ ಪಡೆದುಕೊಳ್ಳುವಂತೆ ಹಾಗೂ ಯಾವುದೇ ರೈತರು ಮಧ್ಯವರ್ತಿಗಳ ಮೊರೆ ಹೋಗದಂತೆ ನೇರವಾಗಿ ಖರೀದಿ ಕೇಂದ್ರಗಳಿಗೆ ಭೇಟಿ ನೀಡಿ ಮಾಹಿತಿ ಪಡೆಯುವಂತೆ ಹೇಳಿದ್ದಾರೆ.ರೈತರಲ್ಲಿ ಫ್ರೂಟ್ಸ್ ಐಡಿ ಇಲ್ಲದೇ ಇದ್ದಲ್ಲಿ ಫ್ರೂಟ್ಸ್‌ನಲ್ಲಿ ಯಾವುದಾದರೂ ತಾಂತ್ರಿಕ ದೋಷವಿದ್ದಲ್ಲಿ ರೈತರು ಕೃಷಿ ಇಲಾಖೆಯನ್ನು ಸಂಪರ್ಕಿಸಿ ಅವಶ್ಯಕ ಮಾಹಿತಿ ಪಡೆಯಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ನವಜಾತ ಗಂಡು ಶಿಶುವನ್ನು ಜೀವ ರಕ್ಷಣೆಗಾಗಿ ಕೊಪ್ಪಳ ಕಿಮ್ಸ್ ನಿಂದ ಝೀರೋ ಟ್ರಾಫಿಕ್ ವ್ಯವಸ್ಥೆಯಲ್ಲಿ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ರವಾನೆ




ನೈಜ್ಯ ದೆಸೆ ನ್ಯೂಸ್

ಕೊಪ್ಪಳ : ಡಿ 28 ಗಂಭೀರ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ನವಜಾತ ಗಂಡು ಶಿಶುವನ್ನು ಜೀವ ರಕ್ಷಣೆಗಾಗಿ ಕೊಪ್ಪಳ ಕಿಮ್ಸ್ ನಿಂದ ಝೀರೋ ಟ್ರಾಫಿಕ್ ವ್ಯವಸ್ಥೆಯಲ್ಲಿ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ರವಾನೆ ಮಾಡಿದ ಘಟನೆ ಡಿ.28ರ ರವಿವಾರ ನಡೆದಿದೆ.ಕೊಪ್ಪಳ ಜಿಲ್ಲೆಯ ಕುಕನೂರು ತಾಲೂಕಿನ ಗುತ್ತೂರು ಗ್ರಾಮದ ಮಲ್ಲಪ್ಪ-ವಿಜಯಲಕ್ಷ್ಮೀ ದಂಪತಿಗೆ ನಿನ್ನೆ ರಾತ್ರಿ ಕುಕನೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಗಂಡು ಮಗು ಜನಿಸಿತ್ತು.ಹೆರಿಗೆ ವೇಳೆ ಶಿಶುವಿನ ಕರುಳುಗಳು ಹೊರಗಡೆ ಬಂದ ಹಿನ್ನೆಲೆ ತಕ್ಷಣವೇ ಹೆಚ್ಚಿನ ಚಿಕಿತ್ಸೆಯ ಅಗತ್ಯವಾಯಿತು.ಈ ಹಿನ್ನೆಲೆ ಕೊಪ್ಪಳದ ತಾಯಿ-ಮಕ್ಕಳ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿದ ಬಳಿಕ, ಹೆಚ್ಚಿನ ಚಿಕಿತ್ಸೆಗೆ ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ಕರೆದೊಯ್ಯುವ ನಿರ್ಧಾರ ಕೈಗೊಳ್ಳಲಾಯಿತು.ಯಾವುದೇ ವಿಳಂಬವಾಗದಂತೆ 5 ಆಂಬ್ಯುಲೆನ್ಸ್ ಗಳ ಸಹಾಯದಿಂದ ಝೀರೋ ಟ್ರಾಫಿಕ್ ವ್ಯವಸ್ಥೆ ಮಾಡಲಾಯಿತು. ಆಂಬ್ಯುಲೆನ್ಸ್ ಸಿಬ್ಬಂದಿ ನಿರಂತರ ವೈದ್ಯಕೀಯ ನಿಗಾ ವಹಿಸಿಕೊಂಡು ಶಿಶುವನ್ನು ಹುಬ್ಬಳ್ಳಿಗೆ ರವಾನೆ ಮಾಡುತ್ತಿದ್ದಾರೆ.ಮಾರ್ಗ ಮಧ್ಯೆ ಆಂಬ್ಯುಲೆನ್ಸ್ ಸುಗಮ ಸಂಚಾರ ಒದಗಿಸಲು ಪೊಲೀಸ್ ಇಲಾಖೆ ಸಂಪೂರ್ಣ ಸಹಕಾರ ನೀಡಿದ್ದು, ಪ್ರಮುಖ ರಸ್ತೆಗಳಲ್ಲಿನ ವಾಹನ ಸಂಚಾರ ನಿಯಂತ್ರಿಸಿ ಝೀರೋ ಟ್ರಾಫಿಕ್ ವ್ಯವಸ್ಥೆ ಕಲ್ಪಿಸಿತು. ಶಿಶುವಿನ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ವೈದ್ಯರು ಜೀವ ಉಳಿಸಲು ಸತತ ಪ್ರಯತ್ನ ನಡೆಸುತ್ತಿದ್ದಾರೆ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

## BHMS

ಹೋಮಿಯೋಪಥಿ ವೈದ್ಯಕೀಯ ಪದವಿ ಎಂದರೆ BHMS (ಬ್ಯಾಚುಲರ್ ಆಫ್ ಹೋಮಿಯೋಪಥಿಕ್ ಮೆಡಿಸಿನ್ ಅಂಡ್ ಸರ್ಜರಿ) ಇಂದು ಹೋಮಿಯೋಪತಿಯು ತ್ವರಿತವಾಗಿ ಪ್ರಗತಿಹೊಂದುತ್ತಿರುವ ಒಂದು ವೈದ್ಯಕೀಯ ಪದ್ಧತಿಯಾಗಿದ್ದು, ಸಾಧಾರಣವಾಗಿ ವಿಶ್ವದ ಎಲ್ಲೆಡೆಗಳಲ್ಲೂ ಆಚರಣೆಯಲ್ಲಿದೆ. ಗುಳಿಗೆಗಳ ಸುರಕ್ಷೆ ಮತ್ತು ತನ್ನ ಚಿಕಿತ್ಸೆಯ ಸೌಮ್ಯತೆಯಿಂದಾಗಿ ಭಾರತದಲ್ಲಿ ಈ ಪದ್ಧತಿಯು ಮನೆಮಾತಾಗಿದೆ. ಒಂದು ಅಧ್ಯಯನವು ಹೇಳುವ ಪ್ರಾಕಾರ, ಭಾರತೀಯ ಜನಸಂಖ್ಯೆಯ ಶೇ.10 ಭಾಗ ತನ್ನ ಆರೋಗ್ಯ ಶುಶೂಶೆಯ ಅಗತ್ಯಗಳಿಗೆ ಕೇವಲ ಹೋಮಿಯೋಪತಿಯ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿದೆ. ಹಾಗೂ ಈ ಪದ್ಧತಿಯು ದೇಶದ ಅತ್ಯಂತ ಜನಜನಿತ ವೈದ್ಯಕೀಯ ಪದ್ಧತಿಗಳಲ್ಲಿ ಎರಡನೆಯ ಸ್ಥಾನವನ್ನು ಪಡೆದಿದೆ ಎಂದು ಪರಿಗಣಿಸಲಾಗಿದೆ. ಹೋಮಿಯೋಪತಿ ಎನ್ನುವ ಪದವು ಗ್ರೀಕ್ ಭಾಷೆಯ ಎರಡು ಪದಗಳಿಂದ ಮಾಡಲ್ಪಟ್ಟಿದೆ. "ಹೊಮೋಟ್ಸ್' ಅಂದರೆ, "ಸಮನಾದ"; "ಪ್ಯಾತೋಸ್" ಅಂದರೆ "ನರಳುವಿಕೆ", ಹೋಮಿಯೋಪತಿ ಎಂದರೆ, ಸರಳವಾಗಿ ಹೇಳುವುದಾದರೆ, ಆರೋಗ್ಯಕರ ವ್ಯಕ್ತಿಗಳು ಸೇವಿಸಿದಲ್ಲಿ ಅವರಲ್ಲಿ ಅದೇ ಖಾಯಿಲೆಯನ್ನು ತರುವ ಸಾಮರ್ಥವುಳ್ಳ ಔಷಧಗಳನ್ನು ಅತ್ಯಲ್ಪ ಪ್ರಮಾಣದಲ್ಲಿ ನೀಡುವುದರ ಮೂಲಕ ಚಿಕಿತ್ಸೆ ಮಾಡುವುದು ಎಂದು ಅರ್ಥ. ಬ್ಯಾಚುಲರ್ ಆಫ್ ಹೋಮಿಯೋಪಥಿಕ್ ಮೆಡಿಸಿನ್ ಅಂಡ್ ಸರ್ಜರಿ): ಇದು ಪದವಿಪೂರ್ವ ಮಟ್ಟದ 66 ತಿಂಗಳ ಕೋರ್ಸ್ ಆಗಿದೆ, ಪದವಿಗೆ ಪ್ರವೇಶ ಪಡೆಯಲು, ವಿದ್ಯಾರ್ಥಿಗಳು ವಿಜ್ಞಾನ ವಿಷಯಗಳೊಂದಿಗೆ 12 ನೇ ತರಗತಿಯಲ್ಲಿ ಶೇಕಡಾ 50% ಅಂಕ ಗಳಿಸಿರಬೇಕು. ಈ ಪದವಿಯು ಹೋಮಿಯೋಪಥಿ ಚಿಕಿತ್ಸಾ ಪದ್ಧತಿ, ಅದರ ತತ್ವಗಳು ಮತ್ತು ರೋಗ ನಿರ್ವಹಣೆಯನ್ನು ಒಳಗೊಂಡಿದೆ. ಉದ್ಯೋಗಗಳು: ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ವಿಮಾ ಕಂಪನಿಗಳು, ಔಷಧೀಯ ಕಂಪನಿಗಳು, ಮತ್ತು ಸಂಶೋಧನಾ ಪ್ರಯೋಗಾಲಯಗಳಲ್ಲಿ ಉದ್ಯೋಗ ಪಡೆಯಬಹುದು.ಸ್ವ-ಉದ್ಯೋಗ: ತಮ್ಮ ಸ್ವಂತ ಕ್ಲಿನಿಕ್ ಅಥವಾ ಆಸ್ಪತ್ರೆ ತೆರೆಯಬಹುದು., ಹೆಚ್ಚುವರಿ ಅಧ್ಯಯನ: ಸಂಶೋಧನಾ ಕ್ಷೇತ್ರಗಳಲ್ಲಿ ಸ್ನಾತಕೋತ್ತರ ಪದವಿ ಮತ್ತು ಡಾಕ್ಟರೇಟ್ ಕೋರ್ಸ್‌ಗಳನ್ನು ಮುಂದುವರಿಸಬಹುದು.

## ಜ 4 ರಂದು ಎ ವಿ ಎಸ್ ಬ್ರಿಲಿಯಂಟ್ ಪದವಿ ಪೂರ್ವ ಕಾಲೇಜಿನಲ್ಲಿ ಕಾವ್ಯ ಕಮ್ಮಟ ಒಂದು ದಿನದ ಕಾರ್ಯಗಾರ ಹೆಚ್ ಎಫ್ ಮಸ್ಕಿ

ನೈಜ್ಯ ದೆಸೆ ನ್ಯೂಸ್



ಸಿಂಧನೂರು:ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ರಾಯಚೂರು ಮತ್ತು ತಾಲೂಕನ್ನು ಸಾಹಿತ್ಯ ಪರಿಷತ್ತು ಸಿಂಧನೂರು ವತಿಯಿಂದ ಜನವರಿ 4 2026 ರಂದು ಸಿಂಧನೂರು ನಗರದ ಎ ವಿ ಎಸ್ ಬ್ರಿಲಿಯಂಟ್ ಪದವಿ ಪೂರ್ವ ಕಾಲೇಜಿನಲ್ಲಿ ಕಾವ್ಯ ಕಮ್ಮಟ ಒಂದು ದಿನದ ಕಾರ್ಯಗಾರ ಕಾರ್ಯಕ್ರಮದ ಹಮ್ಮಿಕೊಳ್ಳಲಾಗಿದೆ ಸಾಹಿತಿಗಳು, ವಿದ್ಯಾರ್ಥಿಗಳು. ಹಾಗೂ ಆಸಕ್ತಿದಾಯಕರು 100 ರೂಪಾಯಿ ಸದಸ್ಯತ್ವದ ನೊಂದಣಿ ಮಾಡಿಕೊಳ್ಳಲು ಕನ್ನಡ ಸಾಹಿತ್ಯ ಪರಿಷತ್ ಸಿಂಧನೂರು ಅಧ್ಯಕ್ಷರಾದ ಎಚ್ಎಫ್ ಮಸ್ಕಿ ಅವರು ತಿಳಿಸಿದರು. ನೋಂದಣಿ ಮಾಡಿಕೊಳ್ಳುವವರು 1) ಶ್ರೀ ವೀರೇಶ್ ಕನ್ನಾರಿ . ಸಂಘಟನಾ ಕಾರ್ಯದರ್ಶಿಗಳು 973198795 2) ಶ್ರೀಮತಿ ಶಾಂತಒಳಗಿನಮನೆ ಗೌರವ ಕೋಶ ಅಧ್ಯಕ್ಷರು . ಫೋನ್ ನಂಬರ್ 7624805893 3) ಶ್ರೀಮತಿ ಶೋಭಾ ತೋರಣಗಲ್ ಕಾರ್ಯಕಾರಿ ಮಂಡಳಿ ಸದಸ್ಯರು ಫೋನ್ ನಂಬರ್ 9632319441 4) ಶ್ರೀ ದುರ್ಗಪ್ಪ ಗುಡದೂರು ಸಂಘಟನಾ ಕಾರ್ಯದರ್ಶಿಗಳು 9480084897 ಇವರನ್ನು ಸಂಪರ್ಕಿಸಿ ಎಂದು ಕ ಸಾ ಪ ಸಿಂಧನೂರು ಅಧ್ಯಕ್ಷರಾದ ಎಚ್ಎಫ್ ಮಸ್ಕಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಗವಿ ಮಠಕ್ಕೂ ಮೊದಲೇ ಹಟ್ಟಿಯಲ್ಲಿ (ಕೊಪ್ಪಳ) ಜಾತ್ರೆ



ನೈಜ್ಯ ದೆಸೆ ನ್ಯೂಸ್

ಹಟ್ಟಿ (ಕೊಪ್ಪಳ) : ಡಿ 28 ದಕ್ಷಿಣ ಭಾರತದ ಕುಂಭಮೇಳ ಎನಿಸಿರುವ ಇಲ್ಲಿನ ಗವಿಸಿದ್ದೇಶ್ವರ ಮಠದ ಮಹಾರಥೋತ್ಸವ ನಡೆಯಲು ಇನ್ನು ಎಂಟು ದಿನಗಳ ಕಾಲ ಸಮಯವಿದೆ. ಅದಕ್ಕೂ ಮೊದಲು ತಾಲ್ಲೂಕಿನ ಹಟ್ಟಿ ಗ್ರಾಮದಲ್ಲಿ ಭಕ್ತರು ಸಂಭ್ರಮದಿಂದ 'ಜೋಳದ ರೊಟ್ಟಿ'ಯ ತೇರು ಎಳೆದಿದ್ದಾರೆ. ಗವಿಮಠದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಮೂರು ವರ್ಷಗಳ ಬಳಿಕ ಹಟ್ಟಿ ಗ್ರಾಮಕ್ಕೆ ಶುಕ್ರವಾರ ರಾತ್ರಿ ಕಾಲಿಡುತ್ತಿದ್ದಂತೆಯೇ ಅಲ್ಲಿ ಸಂಭ್ರಮ ಮನೆ ಮಾಡಿತ್ತು.ಸ್ವಾಮೀಜಿ ಗ್ರಾಮಕ್ಕೆ ಬಂದು ಮರಳಿ ವಾಪಸ್ ಹೋಗುವ ತನಕ ಜೈಕಾರಗಳು, ಘೋಷಣೆಗಳು ಮೊಳಗಿದವು. ಆದರೆ ಸ್ವಾಮೀಜಿ ಮಾತನಾಡುವಾಗ ಮಾತ್ರ ಗಾಢ ಮೌನ ಆವರಿಸಿತ್ತು. ಗ್ರಾಮದ ಜನ ಶ್ರದ್ಧೆಯಿಂದ ಅವರ ಮಾತುಗಳನ್ನು ಆಲಿಸಿ ಚಪ್ಪಾಳೆ ಹೊಡೆಯುತ್ತಿದ್ದರು.ಗ್ರಾಮದ ದೇವಸ್ಥಾನದ ಆವರಣಕ್ಕೆ ಸ್ವಾಮೀಜಿ ಭೇಟಿ ನೀಡಿ ಗ್ರಾಮಸ್ಥರನ್ನು ಉದ್ದೇಶಿಸಿ 'ಹಟ್ಟಿಯಲ್ಲಿ ರೊಟ್ಟಿ ಸಪ್ಪಳವಾದ ಬಳಿಕ ಎಲ್ಲ ಕಡೆಯೂ ರೊಟ್ಟಿ ಸದ್ದಾಗುತ್ತಿದೆ. ಜನ ಜಾಸ್ತಿ ರೊಟ್ಟಿ ಮಾಡಿಕೊಡುತ್ತಿದ್ದಾರೆ. ನಿಮ್ಮೆಲ್ಲರ ಈ ಕೆಲಸ ಮತ್ತಷ್ಟು ಜನರಿಗೆ ಪ್ರೇರಣೆಯಾಗುತ್ತಿದೆ. ಯುವಕರು, ತಾಯಂದಿರು ನಿಮ್ಮೆಲ್ಲರ ಪ್ರೀತಿ ದೊಡ್ಡದು.ಗವಿಮಠದ ಜಾತ್ರೆ ತೇರು ಎಳೆಯಲು ಇನ್ನೊಂದು ವಾರವಿದ್ದು, ಅದಕ್ಕೂ ಮೊದಲು ಇಲ್ಲಿ ರೊಟ್ಟಿ ಹಬ್ಬದ ಸಂಭ್ರಮದ ಮೂಲಕ ನೀವೆಲ್ಲರೂ ಸಂತಸದ ತೇರು ಎಳೆದಿದ್ದೀರಿ' ಎಂದು ಹರ್ಷ ವ್ಯಕ್ತಪಡಿಸಿದರು.'ಭಕ್ತರು ಏನು ಕೊಡುತ್ತಾರೆ ಎನ್ನುವುದು ಮುಖ್ಯವಲ್ಲ' ಎಂದ ಸ್ವಾಮೀಜಿ ಒಬ್ಬ ಭಕ್ತರು ಬಂದು ನಾನು ಕೊತ್ತಂಬರಿ ಸೊಪ್ಪು ಮಾತ್ರ ಕೊಡುತ್ತೇನೆ. ಅದನ್ನು ಎಲ್ಲ ಭಕ್ತರಿಗೆ ಮುಟ್ಟಿಸಬೇಕು' ಎನ್ನುತ್ತಾರೆ. ಅದನ್ನು ಪಡೆದುಕೊಂಡು ಅದೆ ಕೊತ್ತಂಬರಿಯನ್ನು ಸಾರಿಗೆ ಹಾಕಿ ಲಕ್ಷಾಂತರ ಭಕ್ತರಿಗೆ ಉಣಬಡಿಸಿದೆ. ಹೀಗಾಗಿ ಭಕ್ತರು ಕೊಡುವ ಪ್ರೀತಿ ದೊಡ್ಡದು' ಎಂದು ಮಾರ್ಮಿಕವಾಗಿ ಹೇಳಿದರು.ಚುರುಕು ಪಡೆದ ಸಿದ್ಧತೆ: ಜನವರಿ 1ರಿಂದ ಜಾತ್ರೆಯ ಕಾರ್ಯಕ್ರಮಗಳು ಆರಂಭವಾಗಲಿದ್ದು, ಸಿದ್ಧತಾ ಕಾರ್ಯಗಳೂ ಚುರುಕು ಪಡೆದುಕೊಂಡಿವೆ. ಮಹಾದಾಸೋಹದ ಮನೆ ನಿರ್ಮಾಣ, ಆಟೋಟಗಳ ತಾಣ, ತೇರು ಸಾಗುವ ಮಾರ್ಗ ಹೀಗೆ ವಿವಿಧೆಡೆ ಸಿದ್ಧತೆ ಮಾಡಲಾಗುತ್ತಿದೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101